**ದಿನಾಂಕ: 08.03.2016ರ ಮಂಗಳವಾರದಂದು ಪೂರ್ವಾಹ್ನ 11.00 ಗಂಟೆಗೆ ಪ್ರಾಧಿಕಾರದ ಅಧ್ಯಕ್ಷರಾದ ಮಾನ್ಯ ಶ್ರೀಮತಿ ಸುರಯ್ಯಾ ಅಬ್ರಾರ್‌ರವರ ಅಧ್ಯಕ್ಷತೆಯಲ್ಲಿ ಕಚೇರಿ ಸಭಾಂಗಣದಲ್ಲಿ ನಡೆಯುವ ಪ್ರಾಧಿಕಾರದ ಸಾಮಾನ್ಯ ಮತ್ತು 2016-17ನೇ ಸಾಲಿನ ಆಯವ್ಯಯ(ಬಡ್ಜೆಟ್) ಮಂಡನಾ ಸಭೆಯ ನಡಾವಳಿ.**

| ಕ್ರ.ಸ | ಹಾಜರಿದ್ದ ಸದಸ್ಯರು | ಕ್ರ.ಸ | ಗೈರು ಹಾಜರಿದ್ದ ಸದಸ್ಯರು |
|---|---|---|---|
| 1. | ಶ್ರೀಮತಿ ಸುರಯ್ಯಾ ಅಬ್ರಾರ್, ಅಧ್ಯಕ್ಷರು<br>ನಗರಾಭಿವೃದ್ಧಿ ಪ್ರಾಧಿಕಾರ, ಮಡಿಕೇರಿ. | 1. | ಮಾನ್ಯ ಶ್ರೀ ಕೆ.ಜಿ.ಬೋಪಯ್ಯರವರು, ಸದಸ್ಯರು<br>ವಿಧಾನಸಭಾ ಸದಸ್ಯರು, ವಿರಾಜಪೇಟೆ ಕ್ಷೇತ್ರ. |
| 2. | ಮಾನ್ಯ ಶ್ರೀ ಅಪ್ಪಚ್ಚುರಂಜನ್‌ರವರು, ಸದಸ್ಯರು<br>ವಿಧಾನ ಸಭಾ ಸದಸ್ಯರು, ಮಡಿಕೇರಿ ಕ್ಷೇತ್ರ. | 2. | ಮಾನ್ಯ ಜಿಲ್ಲಾಧಿಕಾರಿಗಳು, ಸದಸ್ಯರು<br>ಕೊಡಗು ಜಿಲ್ಲೆ, ಮಡಿಕೇರಿ. |
| 3. | ಮಾನ್ಯ ಶ್ರೀ ಸುನಿಲ್ ಸುಬ್ರಮಣಿರವರು, ಸದಸ್ಯರು<br>ವಿಧಾನ ಪರಿಷತ್ ಸದಸ್ಯರು, ಮಡಿಕೇರಿ. | 3. | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಸದಸ್ಯರು<br>ಕಲ್ಯಾಣಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ. |
| 4. | ಮಾನ್ಯ ಆರಕ್ಷಕ ಅಧೀಕ್ಷಕರು, ಸದಸ್ಯರು<br>ಕೊಡಗು ಜಿಲ್ಲೆ, ಮಡಿಕೇರಿ. | 4. | ಕಾರ್ಯಪಾಲಕ ಅಭಿಯಂತರರು ಸದಸ್ಯರು<br>ಚೆಸ್ಕಾಂ (ಪರವಾಗಿ), ಮಡಿಕೇರಿ. |
| 5. | ಕಾರ್ಯಪಾಲಕ ಅಭಿಯಂತರರು ಸದಸ್ಯರು<br>ಲೋಕೋಪಯೋಗಿ ಇಲಾಖೆ, ಮಡಿಕೇರಿ. | 5. | ಕಾರ್ಯಪಾಲಕ ಅಭಿಯಂತರರು, ಸದಸ್ಯರು<br>ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ<br>ಮಂಡಳಿ, ಮೈಸೂರು |
| 6. | ಪೌರಾಯುಕ್ತರು, ಸದಸ್ಯರು<br>ನಗರಸಭೆ, ಮಡಿಕೇರಿ. | 6 | ಕಾರ್ಯಪಾಲಕ ಅಭಿಯಂತರರು ಆಹ್ವಾನಿತರು<br>ಕರ್ನಾಟಕ ಗೃಹ ಮಂಡಳಿ, ಮೈಸೂರು. |
| 7. | ಸಹಾಯಕ ನಿರ್ದೇಶಕರು, ನಗರ ಯೋಜನಾ ಸದಸ್ಯರು,<br>ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ,<br>ಮಡಿಕೇರಿ. | 7 | ವಿಭಾಗೀಯ ನಿಯಂತ್ರಕರು, ಆಹ್ವಾನಿತರು<br>ಕೆ.ಎಸ್.ಆರ್.ಟಿ.ಸಿ. ಮೈಸೂರು ವಿಭಾಗ, ಪುತ್ತೂರು |
| 8. | ಶ್ರೀ ರಾಜಶೇಖರ್ ಆಯುಕ್ತರು,<br>ನಗರಾಭಿವೃದ್ಧಿ ಪ್ರಾಧಿಕಾರ,<br>ಮಡಿಕೇರಿ. | 8 | ಜಂಟಿ ನಿರ್ದೇಶಕರು, ಆಹ್ವಾನಿತರು<br>ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಡಗು ಜಿಲ್ಲೆ, ಮಡಿಕೇರಿ. |
| | | 9 | ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಆಹ್ವಾನಿತರು<br>ಮಡಿಕೇರಿ ಉಪ ವಿಭಾಗ, ಮಡಿಕೇರಿ. |
| | | 10 | ಜಿಲ್ಲಾ ವಾರ್ತಾ ಮತ್ತು ವಿಶೇಷ ಆಹ್ವಾನಿತರು<br>ಪ್ರಚಾರಾಧಿಕಾರಿಗಳು, |

ಪ್ರಾಧಿಕಾರದ ಆಯುಕ್ತರು ಸಭೆಯಲ್ಲಿ ಹಾಜರಿದ್ದ ಪ್ರಾಧಿಕಾರದ ಅಧ್ಯಕ್ಷರಾದ ಮಾನ್ಯ ಶ್ರೀಮತಿ ಸುರಯ್ಯಾ ಅಬ್ರಾರ್‌ರವರು, ಸೋಮವಾರಪೇಟೆ ಮತ್ತು ಮಡಿಕೇರಿ ಕ್ಷೇತ್ರದ ವಿಧಾನ ಸಭಾ ಸದಸ್ಯರಾದ ಮಾನ್ಯ ಶ್ರೀ ಅಪ್ಪಚ್ಚುರಂಜನ್‌ರವರು, ವಿಧಾನ ಪರಿಷತ್ ಸದಸ್ಯರಾದ ಮಾನ್ಯ ಶ್ರೀ ಸುನಿಲ್ ಸುಬ್ರಮಣಿರವರು ಹಾಗೂ ಸಭೆಯಲ್ಲಿ ಹಾಜರಿದ್ದ ಪ್ರಾಧಿಕಾರದ ಎಲ್ಲಾ ಸದಸ್ಯರುಗಳು, ಆಹ್ವಾನಿತರುಗಳನ್ನು ಸ್ವಾಗತಿಸುತ್ತಾ ಸಭಾ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು.

**1) ವಿಷಯ ಸಂಖ್ಯೆ : 1**

ಹಿಂದಿನ ಸಭೆಯ ಅಂದರೆ ದಿನಾಂಕ:21.09.2015ರಂದು ನಡೆದ ಪ್ರಾಧಿಕಾರದ ಸಭೆಯ ಸಭಾ ನಡಾವಳಿಯನ್ನು ಓದಿ ಅಂಗೀಕರಿಸುವುದು.

**ನಿರ್ಣಯ:–** ಹಿಂದಿನ ಸಭಾ ನಡಾವಳಿಯನ್ನು ಸಭೆಯಲ್ಲಿ ಓದಲಾಯಿತು ಈ ಕೆಳಕಂಡ ವಿಷಯಗಳನ್ನು ಮತ್ತೊಮ್ಮೆ ಸಭೆಯಲ್ಲಿ ಚರ್ಚಿಸಿ ನಿರ್ಣಯ ಕೈಗೊಳ್ಳಲಾಯಿತು.

**ವಿಷಯಸಂಖ್ಯೆ 7ರಲ್ಲಿ** ಬರುವ ಮಡಿಕೇರಿ ಹೋಬಳಿ, ಕರ್ಣಂಗೇರಿ ಗ್ರಾಮದ, ಸರ್ವೆ ನಂಬರ್ 99/1ರಲ್ಲಿ 0.20ಎಕರೆ ಮತ್ತು ಸರ್ವೆ ನಂಬರ್ 99/14ರಲ್ಲಿ 0.20ಎಕರೆ ಒಟ್ಟು 0.40ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸುವ ಬಗ್ಗೆ ಮೆ॥ಕೊಂಗು ಇಂಡಿಯಾ ಪ್ರೈ.ಲಿ.ರವರು ಕೋರಿರುವ ಪ್ರಸ್ತಾವನೆಗೆ ಸಂಬಂಧಿಸಿದಂತೆ ಶ್ರೀ ಕೆ.ಎಂ.ಕಾರ್ಯಪ್ಪ, ಮಹದೇವಪೇಟೆ, ಮಡಿಕೇರಿರವರು ಸದರಿ ಸರ್ವೆ ನಂಬರ್ 99/1ರಲ್ಲಿ ಒಟ್ಟು 39.94ಎಕರೆ ವಿಸ್ತೀರ್ಣದ ಜಮೀನು ನ್ಯಾಯಾಲಯದಲ್ಲಿ ಸ್ಟೇ ಇರುವುದರಿಂದ ಆ ಜಮೀನಿನಲ್ಲಿ ಯಾವುದೇ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ಅನುಮತಿ ನೀಡಬಾರದೆಂದು ಕೋರಿದ್ದರೂ ಸಹ ಈ ಕಚೇರಿಯಿಂದ ಈಗಾಗಲೇ ಷರತ್ತುವಿಧಿಸಿ, ಭೂ ಪರಿವರ್ತನೆಗೆ ನಿರಾಕ್ಷೇಪಣಾ ಪತ್ರ ನೀಡಿರುವುದರ ಬಗ್ಗೆ ಚರ್ಚಿಸಿ, ಮುಂದೆ ಇಂತಹ ಪ್ರಕರಣಗಳು ಬಂದಲ್ಲಿ ಪ್ರಾಧಿಕಾರದ ವಕೀಲರಿಂದ ಕಾನೂನು ಸಲಹೆ ಪಡೆದುಕೊಂಡು ನಂತರದಲ್ಲಿ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ, ಸಭಾ ನಿರ್ಣಯದಂತೆ ಕ್ರಮ ಕೈಗೊಳ್ಳುವುದು ಸೂಕ್ತವೆಂದು ತೀರ್ಮಾನಿಸಲಾಯಿತು.

**ವಿಷಯಸಂಖ್ಯೆ 10ಕ್ಕೆ** ಸಂಬಂಧಿಸಿದಂತೆ ಮಡಿಕೇರಿ ನಗರಸಭಾ ವ್ಯಾಪ್ತಿಯ ಕನ್ನಂಡಬಾಣೆ ಕೆರೆಗೆ ಬರುವ ಕಲುಷಿತ ನೀರನ್ನು ತಡೆಗಟ್ಟುವ ಸಲುವಾಗಿ ಯು.ಜಿ.ಡಿ. ಮೂಲಕ ಪೈಪ್‌ಲೈನ್‌ಗಳನ್ನು ಅಳವಡಿಸುವ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗಿದೆ. ಈ ಬಗ್ಗೆ ಸರ್ಕಾರದಲ್ಲಿ ಪರಿಶೀಲಿಸಲಾಗಿ, ಸದರಿ ಪ್ರಸ್ತಾವನೆಯನ್ನು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ನಿರ್ದೇಶಕರು, ಬೆಂಗಳೂರುರವರ ಅಭಿಪ್ರಾಯಕ್ಕಾಗಿ ಕೋರಿದ್ದು, ಮಾನ್ಯ ನಿರ್ದೇಶಕರು, ಸರ್ಕಾರಕ್ಕೆ ಪ್ರಸ್ತಾವನೆಯನ್ನು ಮರು ಸಲ್ಲಿಸಿರುತ್ತಾರೆಂದು ಆಯುಕ್ತರು ಸಭೆಯಲ್ಲಿ ಮಾಹಿತಿ ನೀಡಿದರು.

ಈ ಬಗ್ಗೆ ನಗರಸಭಾ ಆಯುಕ್ತರು ಸಹ ಮಾತನಾಡಿ ನಗರಸಭೆಯಲ್ಲಿ ನಡೆದ ಸಭೆಯಲ್ಲಿ 2016–17ನೇ ಸಾಲಿಗೆ ಸದರಿ ಯೋಜನೆಗೆ ಪೈಪ್‌ಲೈನ್ ಮತ್ತು ಒಳಚರಂಡಿ ವ್ಯವಸ್ಥೆಯನ್ನು ಮಾಡಲು ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ ಎಂಬ ಮಾಹಿತಿಯನ್ನು ಸಭೆಯಲ್ಲಿ ನೀಡಿದರು. ಈ ಬಗ್ಗೆ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಆಯುಕ್ತರು ಜಂಟಿಯಾಗಿ ಸರ್ಕಾರದೊಂದಿಗೆ ವ್ಯವಹರಿಸಿ ಸದರಿ ಪ್ರಸ್ತಾವನೆಗೆ ಸರ್ಕಾರದ ಅನುಮೋದನೆಯನ್ನು ಪಡೆದುಕೊಂಡು ಮಳೆಗಾಲದ ಪೂರ್ವದಲ್ಲಿಯೇ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಸೂಕ್ತ ಕ್ರಮ ವಹಿಸಬೇಕಾಗಿ ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**ವಿಷಯಸಂಖ್ಯೆ 12ಕ್ಕೆ** ಸಂಬಂಧಿಸಿದಂತೆ ನಗರಸಭಾ ಆಯುಕ್ತರು ಮಾತನಾಡಿ ಜನವರಿ 2016ರಲ್ಲಿ ನಗರಸಭೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಸಿ.ಎ.ನಿವೇಶನಗಳನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸುವ ಬಗ್ಗೆ ಚರ್ಚಿಸಲಾಗಿ, ಈಗಾಗಲೇ ನಗರಸಭೆಯಲ್ಲಿ ಖಾತೆಯಾಗಿರುವ ನಿವೇಶನಗಳನ್ನು ನಗರಸಭೆಯಲ್ಲಿಯೇ ಉಳಿಸಿಕೊಂಡು ಉಳಿದಂತೆ ಮುಂದಕ್ಕೆ ಬರುವ ವಿನ್ಯಾಸಗಳಲ್ಲಿನ ಸಿ.ಎ. ನಿವೇಶನಗಳನ್ನು ಪ್ರಾಧಿಕಾರಕ್ಕೆ ವರ್ಗಾಯಿಸಲು ಕ್ರಮ ಕೈಗೊಳ್ಳಬಹುದೆಂದು ನಗರಸಭೆಯ ಸಾಮಾನ್ಯ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ನಗರಸಭೆಯ ಆಯುಕ್ತರು ಸಭೆಯ ಗಮನಕ್ಕೆ ತಂದರು. ಇನ್ನುಮುಂದೆ ಹೊಸ ಬಡಾವಣೆಯಲ್ಲಿ ಬರುವ ಸಿ.ಎ. ನಿವೇಶನಗಳನ್ನು ಪ್ರಾಧಿಕಾರಕ್ಕೆ ಹಸ್ತಾಂತರ ಮಾಡಲಾಗುವುದು ಎಂದು ತಿಳಿಸಿದರು ಹಾಗೂ ಸಿ.ಪಿ.ಸಿ. ಲೇಔಟಿನಲ್ಲಿ ಪಾರ್ಕ್ ಮತ್ತು ಪಾರ್ಕಿಂಗ್‌ಗಾಗಿ ಕಾಯ್ದಿರಿಸಿರುವ ಜಾಗಕ್ಕೆ ನಗರಸಭೆಯಿಂದ ಕಾಂಪೌಂಡ್‌ನ್ನು ಅಳವಡಿಸಿ, ಉದ್ಯಾನವನವನ್ನು ಅಭಿವೃದ್ಧಿ ಪಡಿಸಲಾಗುವುದೆಂದು ಮಾಹಿತಿಯನ್ನು ನೀಡಿದರು.

ಈ ಬಗ್ಗೆ ಪ್ರಾಧಿಕಾರದ ಅಧ್ಯಕ್ಷರು ಪ್ರತಿಕ್ರಿಯಿಸುತ್ತಾ, ಕಾಲೇಜು ರಸ್ತೆಯಲ್ಲಿ ವಾಹನ ದಟ್ಟಣೆ ಅಧಿಕವಿರುವುದರಿಂದ ಇವುಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಸಿ.ಪಿ.ಸಿ.ಲೇಔಟಿಗೆ ಕಾಲೇಜು ರಸ್ತೆಯಿಂದ ಸಂಪರ್ಕವಿರುವುದರಿಂದ ಪಾರ್ಕಿಂಗ್‌ಗಾಗಿ ಕಾಯ್ದಿರಿಸಿರುವ ನಿವೇಶನದಲ್ಲಿ ವಾಹನ ಪಾರ್ಕಿಂಗ್ ವ್ಯವಸ್ಥೆಯನ್ನು ಕಲ್ಪಿಸುವುದು ಸೂಕ್ತವೆಂದು ಅಭಿಪ್ರಾಯವನ್ನು ನೀಡಿದರು. ಈ

ಬಗ್ಗೆ ಪರಿಶೀಲಿಸಿ, ಸೂಕ್ತ ಕ್ರಮ ವಹಿಸಲು ನಗರಸಭಾ ಆಯುಕ್ತರಿಗೆ ಅಧಿಕಾರ ನೀಡಿ ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**ವಿಷಯಸಂಖ್ಯೆ 13(1)ಕ್ಕೆ** ಸಂಬಂಧಿಸಿದಂತೆ ಮಡಿಕೇರಿ ನಗರದ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಬರುವ ಕೆ.ನಿಡುಗಣೆ ಗ್ರಾಮದ ಸರ್ವೆ ನಂಬರ್ 1/13ಪಿ3 ರಲ್ಲಿ ಅಂದಾಜು 61.78ಎಕರೆ ವಿಸ್ತೀರ್ಣದ ಜಮೀನನ್ನು ಪ್ರಾಧಿಕಾರಕ್ಕೆ ಮಂಜೂರು ಮಾಡಿಕೊಡಲು ಮಾನ್ಯ ಜಿಲ್ಲಾಧಿಕಾರಿಯವರನ್ನು ಕೋರಲಾಗಿ, ಅವರ ಪತ್ರ ಸಂಖ್ಯೆ:ಜಾಗ/90/2015–16, ದಿನಾಂಕ:07.11.2015ರಲ್ಲಿ ಸದರಿ ಸರ್ವೆ ನಂಬರ್ 1/13ಪಿ3 ರಲ್ಲಿರುವ 61.78ಎಕರೆ ವಿಸ್ತೀರ್ಣದ ಜಮೀನಿನ ಪೈಕಿ 11.80 ಎಕರೆ ವಿಸ್ತೀರ್ಣದ ಜಮೀನನ್ನು ಪ್ರಾಧಿಕಾರದಿಂದ ವಸತಿ ಉದ್ದೇಶದ ನಿವೇಶನಗಳನ್ನು ಅಭಿವೃದ್ಧಿ ಪಡಿಸಿ, ಸಾರ್ವಜನಿಕರಿಗೆ ಹಂಚಲು ಅಧ್ಯಕ್ಷರು, ನಗರಾಭಿವೃದ್ಧಿ ಪ್ರಾಧಿಕಾರ, ಮಡಿಕೇರಿರವರ ಹೆಸರಿಗೆ ಕರ್ನಾಟಕ ಭೂ ಮಂಜೂರಾತಿ ನಿಯಾಮಾವಳಿಯ 1969ರನ್ವಯ ಮಂಜೂರಾತಿ ಮಾಡಲು ಸರ್ಕಾರದ ಪೂರ್ವಾನುಮೋದನೆಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಕಂದಾಯ ಇಲಾಖೆ, ಬೆಂಗಳೂರುರವರನ್ನು ಕೋರಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

ಸದರಿ ಪ್ರಸ್ತಾವನೆಗೆ ಮಂಜೂರಾತಿಯನ್ನು ಕೋರುವ ಪೂರ್ವದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು, ಮಡಿಕೇರಿ ವಿಭಾಗ, ಮಡಿಕೇರಿರವರ ಪತ್ರ ಸಂಖ್ಯೆ: ಎ3/ಎಲ್.ಎಂ.ಡಿ/ಸ/420/2014–15, ದಿನಾಂಕ:11.09.2015ರಲ್ಲಿ ಸದರಿ ಜಮೀನು ಕಚೇರಿ ದಾಖಲಾತಿಗಳ ಪ್ರಕಾರ ಮೀಸಲು ಅರಣ್ಯ, ರಕ್ಷಿತಾರಣ್ಯ, ಘೋಷಿತಾರಣ್ಯ ಹಾಗೂ ಡೀಮ್ಡ್ ಫಾರೆಸ್ಟ್ ವರದಿಯಲ್ಲಿ ಸೇರ್ಪಡೆಯಾಗಿರುವುದಿಲ್ಲವೆಂಬ ಮಾಹಿತಿಯನ್ನು ನೀಡಿರುತ್ತಾರೆ. ಇದೇ ಪ್ರಸ್ತಾವನೆಗೆ ಸಂಬಂಧಿಸಿದಂತೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರು, ಕೊಡಗು ವೃತ್ತ, ಮಡಿಕೇರಿರವರ ಪತ್ರ ಸಂಖ್ಯೆ:ಭೂಮಿ/ವಸತಿಯೋಜನೆ/ಸಿ.ಆರ್–24/2015–16, ದಿನಾಂಕ:03.02.2015ರಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು) ಅರಣ್ಯ ಭವನ, ಬೆಂಗಳೂರುರವರಿಗೆ ಬರೆದ ಪತ್ರದಲ್ಲಿ ಪ್ರಸ್ತಾವಿತ ಜಾಗವು ಆರ್.ಟಿ.ಸಿ.ಯ ಪ್ರಕಾರ ಪೈಸಾರಿ ಜಾಗವಾಗಿರುತ್ತದೆ. ಈ ಪ್ರದೇಶದಲ್ಲಿ ಇಲಾಖಾ ವತಿಯಿಂದ ಬೆಳೆಸಲಾದ ನೆಡುತೋಪುಗಳಿರುವುದರಿಂದ ಜಾಗ ಮಂಜೂರಾತಿ ಮಾಡುವುದು ಸೂಕ್ತವಲ್ಲವೆಂದು ಅಭಿಪ್ರಾಯ ನೀಡಿರುತ್ತಾರೆ ಹಾಗೂ ಕೆ.ನಿಡುಗಣೆ ಗ್ರಾಮವು ಕೂಟುಹೊಳೆಯ ಜಲಾನಯನ ಪ್ರದೇಶವಾಗಿದ್ದು (ಕ್ಯಾಚ್‌ಮೆಂಟ್ ಏರಿಯಾ) ಮಡಿಕೇರಿ ನಗರ ಪ್ರದೇಶಕ್ಕೆ ಕುಡಿಯುವ ನೀರಿನ ಸರಬರಾಜಿನ ಮೂಲ ಸ್ಥಾನವಾಗಿ ನಗರ ಪ್ರದೇಶಕ್ಕೆ ನೀರು ಸರಬರಾಜು ಆಗುತ್ತಿರುವುದರಿಂದ ಕೆ.,ನಿಡುಗಣೆ ಗ್ರಾಮದ ಸರ್ವೆ ನಂಬರ್ 1/13ಪಿ3 ರಲ್ಲಿರುವ ಪೂರ್ಣ ಜಾಗವನ್ನು ವಿವಿಧ ಉದ್ದೇಶ/ಯೋಜನೆಗಳಿಗೆ ಮಂಜೂರು ಮಾಡಿದಲ್ಲಿ ಕುಡಿಯುವ ನೀರಿನ ಜಲಮೂಲಕ್ಕೆ ಧಕ್ಕೆ ಉಂಟಾಗುವುದಲ್ಲದೆ ಮುಂದೆ ಮಡಿಕೇರಿ ನಗರದ ನಿವಾಸಿಗಳಿಗೆ ಕುಡಿಯುವ ನೀರಿನ ಭದ್ರತೆಗೆ ಧಕ್ಕೆ ಉಂಟಾಗಬಹುದೆಂದು ಅಭಿಪ್ರಾಯ ಪಡಲಾಗಿದೆ ಎಂದು ಪ್ರಾಧಿಕಾರಕ್ಕೆ ನೀಡಿರುವ ಪತ್ರದ ಒಕ್ಕಣೆಯನ್ನು ಆಯುಕ್ತರು ಸಭೆಯಲ್ಲಿ ಓದಿ ವಿವರಿಸಿದರು. ಈ ಬಗ್ಗೆ ಸಭೆಯಲ್ಲಿ ಚರ್ಚಿಸಿ, ಸದರಿ ಜಮೀನಿನಲ್ಲಿ ಅಂದಾಜು 10.00ಎಕರೆ ಜಾಗವನ್ನು ಈಗಾಗಲೇ ಸರ್ಕಾರವು ಕೆಲವು ಫಲಾನುಭವಿಗಳಿಗೆ ಮಂಜೂರು ಮಾಡಿದ್ದು, ಇದರಿಂದ ಕುಡಿಯುವ ನೀರಿಗೆ ಯಾವುದೇ ಧಕ್ಕೆಯುಂಟಾಗುವುದಿಲ್ಲವೇ ಎಂದು ಪ್ರಶ್ನಿಸುತ್ತಾ, ಪ್ರಾಧಿಕಾರಕ್ಕೂ ಸಹ ಕೇವಲ 11.80ಎಕರೆ ಜಾಗ ಮಂಜೂರು ಮಾಡಲು ಪ್ರಸ್ತಾವನೆ ಇದ್ದು, ಇದರಿಂದ ಜಲಮೂಲಕ್ಕೆ ಯಾವುದೇ ರೀತಿಯ ಧಕ್ಕೆಯುಂಟಾಗದ ರೀತಿಯಲ್ಲಿ ಅಭಿವೃದ್ಧಿ ಪಡಿಸಬಹುದೆಂದು ಅಭಿಪ್ರಾಯಿಸಿ ಅರಣ್ಯ ಇಲಾಖೆಯಿಂದಲೇ ಎರಡು ಬಗೆಯ ಅಭಿಪ್ರಾಯಗಳನ್ನು ನೀಡಿರುವ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಯವರಿಗೆ ಮಾಹಿತಿಯನ್ನು ಸಲ್ಲಿಸಿ ಸದರಿ ಜಾಗವು ಸರ್ಕಾರಿ ಜಾಗವಾಗಿರುವುದರಿಂದ ಪ್ರಾಧಿಕಾರದಿಂದ ವಸತಿ ಬಡಾವಣೆ ನಿರ್ಮಿಸಲು ಮಂಜೂರಾತಿ ಮಾಡಲು ಮತ್ತೊಮ್ಮೆ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕಾಗಿ ಮಾನ್ಯ ಜಿಲ್ಲಾಧಿಕಾರಿಯವರನ್ನು ಕೋರುವಂತೆ ಸಭೆಯು ಸರ್ವಾನುಮತದ ಅಂಗೀಕಾರವನ್ನು ನೀಡಿತು.

ಈ ಮೇಲಿನ ವಿಷಯಗಳೊಂದಿಗೆ ಹಿಂದಿನ ಸಭಾ ನಡಾವಳಿಯನ್ನು ಒಪ್ಪಿ ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**2) ವಿಷಯ ಸಂಖ್ಯೆ :2**

2015ನೇ ಸೆಪ್ಟೆಂಬರ್ ತಿಂಗಳಿನಿಂದ ಜನವರಿ 2015ನೇ ತಿಂಗಳವರೆಗಿನ ಜಮಾ ಖರ್ಚುಗಳನ್ನು ಅಂಗೀಕರಿಸುವ ಬಗ್ಗೆ.

**ಟಿಪ್ಪಣಿ:–** ಜಮಾ ಖರ್ಚುಗಳ ವಿವರ ಈ ಕೆಳಗಿನಂತಿವೆ.

**ಜಮಾ**

| | | | |
|---|---|---|---|
| 1. | ಪರಿಶೀಲನಾ ಶುಲ್ಕ. | ರೂ. | 5,27,082.00 |
| 2. | ಕೆ.ಟಿ.ಸಿ.ಪಿ. ಕಾಯ್ದೆ 1961ರ ಕಲಂ 18ರಡಿ ಪಾವತಿಸಿಕೊಂಡಿರುವ ಶುಲ್ಕ | ರೂ. | 1,54,885.00 |
| 3. | ಕೆರೆ ಅಭಿವೃದ್ಧಿ ಶುಲ್ಕ | ರೂ. | 8,82,650.00 |
| 4. | ಮಾಹಿತಿ ಹಕ್ಕು ಅಧಿನಿಯಮ 2005ರಡಿ ಪಾವತಿಸಿಕೊಂಡಿರುವ ಶುಲ್ಕ | ರೂ. | 470.00 |
| 5. | ಬ್ಯಾಂಕ್ ಉಳಿತಾಯ ಖಾತೆ ಬಡ್ಡಿ | ರೂ. | 2,60,488.00 |
| 6. | ಇಂಜಿನಿಯರ್ ಪರವಾನಿಗೆ ಶುಲ್ಕ | ರೂ. | 4,000.00 |
| 7. | ಕೆರೆ ಅಭಿವೃದ್ಧಿ ಶುಲ್ಕ ಹೆಚ್.ಡಿ.ಎಫ್.ಸಿ ಬ್ಯಾಂಕ್‌ನಿಂದ ಕಾವೇರಿ ಗ್ರಾಮೀಣ ಬ್ಯಾಂಕ್‌ಗೆ ವರ್ಗಾವಣೆ | ರೂ. | 83,42,245.45 |
| 8. | ಕೆರೆ ಅಭಿವೃದ್ಧಿ ಶುಲ್ಕ ಕಾವೇರಿ ಗ್ರಾಮೀಣ ಬ್ಯಾಂಕ್‌ನಿಂದ ವಿಜಯ ಬ್ಯಾಂಕ್‌ಗೆ ವರ್ಗಾಯಿಸಿ ವಿಜಯ ಬ್ಯಾಂಕಿನಲ್ಲಿ ಠೇವಣಿ ಹೂಡಿರುವುದು | ರೂ. | 50,00,000.00 |
| 9. | ಇತರೆ | ರೂ. | 1,160.00 |
| | **ಒಟ್ಟು ಜಮೆ** | ರೂ. | **1,51,72,980.00** |

**ಖರ್ಚು**

| | | | |
|---|---|---|---|
| 1. | ಅಧ್ಯಕ್ಷರ ಗೌರವಧನ ಮತ್ತು ಇತರೆ ಭತ್ಯೆಗಳು | ರೂ. | 1,37,200.00 |
| 2. | ಆಯುಕ್ತರ ಪ್ರಭಾರ ಭತ್ಯೆ | ರೂ. | 10,540.00 |
| 3. | ಸಿಬ್ಬಂದಿ ವೇತನ | ರೂ. | 1,58,817.00 |
| 4. | ಕಂಪ್ಯೂಟರ್ ವೆಬ್‌ಸೈಟ್ ನವೀಕರಣ ಪ್ರೀಮಿಯರ್ ಟೆಕ್ನಾಲಜಿ, ಬೆಂಗಳೂರಿಗೆ ಪಾವತಿ | ರೂ. | 5,000.00 |
| 5. | 2014–15ನೇ ಸಾಲಿನ ಲೆಕ್ಕ ಪರಿಶೋಧನಾ ಶುಲ್ಕ | ರೂ. | 21,107.00 |
| 6. | ವಿದ್ಯುಚ್ಛಕ್ತಿ ಬಿಲ್ ಪಾವತಿ ವೆಚ್ಚ | ರೂ. | 4,022.00 |
| 7. | ದೂರವಾಣಿ ವೆಚ್ಚ | ರೂ. | 7,121.00 |
| 8. | ಸ್ಟೇಷನರಿ ಖರೀದಿ ವೆಚ್ಚ | ರೂ. | 4,209.00 |
| 9. | ಸಭಾ ಉಪಹಾರ ವೆಚ್ಚ | ರೂ. | 1,100.00 |
| 10. | ರಾಷ್ಟ್ರೀಯ ಹಬ್ಬಕ್ಕೆ ಮಾನ್ಯ ಜಿಲ್ಲಾಧಿಕಾರಿಯವರಿಗೆ ವಂತಿಕೆ ಪಾವತಿಸಿರುವುದು (ಕನ್ನಡ ರಾಜ್ಯೋತ್ಸವ) (ಗಣ ರಾಜ್ಯೋತ್ಸವ) | ರೂ | 10,000.00 |
| 11. | ಮುದ್ರಣ ವೆಚ್ಚ (2014–15ನೇ ಸಾಲಿನ ಲೆಕ್ಕ ಪರಿಶೋಧನೆ ವರದಿಯ 410 ಪುಸ್ತಕಗಳನ್ನು ಮುದ್ರಿಸಿರುವುದು) | ರೂ. | 9,980.00 |
| 12. | ಕೆರೆ ಅಭಿವೃದ್ಧಿ ಶುಲ್ಕ ಹೆಚ್.ಡಿ.ಎಫ್.ಸಿ ಬ್ಯಾಂಕ್‌ನಿಂದ ಕಾವೇರಿ ಗ್ರಾಮೀಣ ಬ್ಯಾಂಕ್‌ಗೆ ವರ್ಗಾವಣೆ | ರೂ. | 83,42,245.45 |
| 13. | ಕೆರೆ ಅಭಿವೃದ್ಧಿ ಶುಲ್ಕ ಕಾವೇರಿ ಗ್ರಾಮೀಣ ಬ್ಯಾಂಕ್‌ನಿಂದ ವಿಜಯ ಬ್ಯಾಂಕ್‌ಗೆ ವರ್ಗಾಯಿಸಿ ವಿಜಯ ಬ್ಯಾಂಕಿನಲ್ಲಿ ಠೇವಣಿ ಹೂಡಿರುವುದು | ರೂ. | 50,00,000.00 |
| 14. | ಕೆ.ಟಿ.ಸಿ.ಪಿ ಕಾಯ್ದೆ ಕಲಂ 18ರಡಿ ಪಾವತಿಸಿಕೊಂಡಿರುವ ಶೇ.5ರ ಭಾಗ ನಗರ ಯೋಜನಾ ಮಂಡಳಿಗೆ ಪಾವತಿ | ರೂ. | 1,22,446.00 |

| | | | |
|---|---|---|---|
| 15. | ಗದ್ದಿಗೆ ಉದ್ಯಾನವನಕ್ಕೆ ಸಂಬಂಧಿಸಿದ ವೆಚ್ಚ<br>1. ಗದ್ದಿಗೆ ಉದ್ಯಾನವನದಲ್ಲಿ ಹೆಚ್ಚುವರಿ ಅಭಿವೃದ್ಧಿ ಕಾಮಗಾರಿಗಳನ್ನು ಮಾಡಿಸಿರುವ ಬಾಬ್ತು ಗುತ್ತಿಗೆದಾರರಾದ ಶ್ರೀ ಸದಾಶಿವ ರೈಗೆ ರವರಿಗೆ ಭಾಗಶಃ ಬಿಲ್ ಮೊಬಲಗು ಪಾವತಿ | ರೂ. | 12,31,330.00 |
| | **ಒಟ್ಟು ವೆಚ್ಚ** | ರೂ. | **1,50,65,117.00** |

**<u>ಘೋಶ್ವಾರೆ:</u>**

| | | | |
|---|---|---|---|
| 1 | 2015 ಸೆಪ್ಟೆಂಬರ್ ತಿಂಗಳಿನ ಆರಂಭಿಕ ಶಿಲ್ಕು | ರೂ. | 1,62,98,805.00 |
| 2 | 2015 ಸೆಪ್ಟೆಂಬರ್ ತಿಂಗಳಿನಿಂದ ಜನವರಿ 2016ರವರೆಗಿನ ಜಮೆ | ರೂ. | 1,51,72,980.00 |
| 3 | 2015ರ ಒಟ್ಟು ಜಮೆ | ರೂ. | **3,14,71,785.00** |
| 4 | 2015ರ ಸೆಪ್ಟೆಂಬರ್ ತಿಂಗಳಿನಿಂದ ಜನವರಿ 2016ರವರೆಗಿನ ಖರ್ಚು | ರೂ. | 1,50,65,117.00 |
| 5 | 2015ನೇ ಡಿಸೆಂಬರ್ (31.12.2015) ತಿಂಗಳ ಆಖೈರು ಶಿಲ್ಕು | ರೂ. | **<u>1,64,06,668.00</u>** |
| 6 | ವಿಜಯ ಬ್ಯಾಂಕ್, ಮಡಿಕೇರಿಯಲ್ಲಿ ಠೇವಣಿ ಹೂಡಿಕೆ (ಕೆರೆ ಅಭಿವೃದ್ಧಿ ಶುಲ್ಕ) | ರೂ. | 50,00,000.00 |
| 7 | ಉಳಿತಾಯ ಖಾತೆಯಲ್ಲಿರುವ ಜನವರಿ 2016ರ ಆಖೈರು ಶಿಲ್ಕು | ರೂ. | **<u>1,14,06,668.00</u>** |

ಮೇಲಿನ ಜಮೆ ಮತ್ತು ಖರ್ಚುಗಳಿಗೆ ಸಭೆಯ ಅಂಗೀಕಾರಕ್ಕಾಗಿ ಸಲ್ಲಿಸಿದೆ.

**<u>ನಿರ್ಣಯ:–</u>** 2015ನೇ ಸೆಪ್ಟೆಂಬರ್ ತಿಂಗಳಿನಿಂದ ಜನವರಿ 2016ನೇ ತಿಂಗಳವರೆಗಿನ ಜಮಾ ರೂ. 1,51,72,980/– ಮತ್ತು ಖರ್ಚು ರೂ. 1,50,65,117/–ಗಳಿಗೆ ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**<u>3) ವಿಷಯ ಸಂಖ್ಯೆ 3:–</u> 2016–17ನೇ ಸಾಲಿನ ಅಂದಾಜು ಆಯವ್ಯಯ ಮಂಡನೆಯನ್ನು (ಬಡ್ಜೆಟ್) ಸಭೆಯಲ್ಲಿ ಅಂಗೀಕರಿಸುವ ಬಗ್ಗೆ.**

**ಟಿಪ್ಪಣಿ:–** ಅಂದಾಜು ಆಯವ್ಯಯದ ವಿವರಗಳನ್ನು ಈ ಕೆಳಗಿನಂತೆ ಸಲ್ಲಿಸಲಾಗಿದೆ.

**ನಗರಾಭಿವೃದ್ಧಿ ಪ್ರಾಧಿಕಾರ, ಮಡಿಕೇರಿ**

**2016–17ನೇ ಸಾಲಿನ ಅಂದಾಜು ಜಮೆಯ ವಿವರ ಆಯವ್ಯಯ (ಬಡ್ಜೆಟ್) ವಿವರ**

| ಕ್ರ. ಸಂ | ಜಮೆಯ ವಿವರ | 2013–14ನೇ ಸಾಲಿನ ಜಮೆ | 2014–15ನೇ ಸಾಲಿನ ಜಮೆ | 2015–16ನೇ ಸಾಲಿನ ಜಮೆ | 2016–17ನೇ ಸಾಲಿನ ನಿರೀಕ್ಷಿತ ಜಮೆ |
|---|---|---|---|---|---|
| 1 | ಪರಿಶೀಲನಾ ಶುಲ್ಕ | 3,79,491.00 | 22,81,775.00 | 7,05,278.00 | **8,00,000.00** |
| 2 | ಕೆ.ಟಿ.ಸಿ.ಪಿ. ಕಾಯ್ದೆ 1961ರ ಕಲಂ 18 ರಲ್ಲಿ ಸಂಗ್ರಹಿಸಲಾದ ಶುಲ್ಕ | 4,14,848.00 | 22,44,892.00 | 2,01,450.00 | **3,00,000.00** |
| 3 | ಕೆರೆ ಅಭಿವೃದ್ಧಿ ಶುಲ್ಕ | 25,81,550.00 | 41,83,500.00 | 14,13,258.00 | **16,00,000.00** |
| 4 | ಇಂಡಿಯನ್ ಬ್ಯಾಂಕ್ ನಿಂದ ಹೆಚ್.ಡಿ.ಎಫ್.ಸಿ ಬ್ಯಾಂಕ್‌ಗೆ ವರ್ಗಾವಣೆಯಾಗಿ ಮರು ಜಮೆ | - | 31,12,000.00 | - | - |
| 5 | ಫಲಪ್ರದಗೊಂಡಿರುವ ಠೇವಣಿ ಹಣವನ್ನು | 14,30,024.00 | - | - | - |

| | | | | | |
|---|---|---|---|---|---|
| | ಉಳಿತಾಯ ಖಾತೆಗೆ ಮರು ಜಮೆ | | | | |
| 6 | ಎಲ್ಲಾ ಬ್ಯಾಂಕ್‌ಗಳ ಉಳಿತಾಯ ಖಾತೆಯಲ್ಲಿರುವ ಬಡ್ಡಿ | - | 3,57,986.00 | 4,84,511.00 | 5,00,000.00 |
| 7 | ಟೆಂಡರ್ ಫಾರಂ ಶುಲ್ಕ+ಟೆಂಡರ್ ಠೇವಣಿ ಶುಲ್ಕ | 1,61,000.00 | - | - | - |
| 8 | ಮಾಹಿತಿ ಹಕ್ಕು ಅಧಿನಿಯಮ 200ರಡಿ ಪಾವತಿಸಿಕೊಂಡಿರುವ ಶುಲ್ಕ | 1,236.00 | 5,146.00 | 2,680.00 | 5,000.00 |
| 9 | ಟಿ.ಡಿ.ಎಸ್ ಪಾವತಿಸಿರುವುದು | 3,511.00 | 1,630.00 | - | |
| 10 | ಮಾಹಾಯೋಜನೆಗೆ ಸಂಬಂಧಿಸಿದಂತೆ ಶುಲ್ಕ (ನಕ್ಷೆ+ಸಿ.ಡಿ. ಶುಲ್ಕ) | - | **15,500.00** | - | 10,000.00 |
| 11 | ಇಂಜಿನಿಯರವರಿಗೆ ಪರವಾನಿಗೆ ನೀಡುವ/ ನವೀಕರಿಸುವ ಶುಲ್ಕ | 24,000.00 | **26,000.00** | 20,000.00 | 25,000.00 |
| 12 | ಕೆರೆ ಅಭಿವೃದ್ಧಿ ಶುಲ್ಕ ಹೆಚ್.ಡಿ.ಎಫ್.ಸಿ ಬ್ಯಾಂಕ್‌ನಿಂದ ಕಾವೇರಿ ಗ್ರಾಮೀಣ ಬ್ಯಾಂಕ್‌ಗೆ ವರ್ಗಾವಣೆ | - | - | 83,42,245.45 | - |
| 13 | ಕೆರೆ ಅಭಿವೃದ್ಧಿ ಶುಲ್ಕ ಕಾವೇರಿ ಗ್ರಾಮೀಣ ಬ್ಯಾಂಕ್‌ನಿಂದ ವಿಜಯ ಬ್ಯಾಂಕ್‌ಗೆ ವರ್ಗಾಯಿಸಿ ವಿಜಯ ಬ್ಯಾಂಕಿನಲ್ಲಿ ಠೇವಣಿ ಹೂಡಿರುವುದು | - | - | 50,00,000.00 | - |
| 14 | ಸಿಬ್ಬಂದಿಯವರಿಗೆ ಹೆಚ್ಚುವರಿಯಾಗಿ ಪಾವತಿಸಿದ್ದ ವೇತನವನ್ನು ಮರು ಜಮೆ ಮಾಡಿರುವುದು. | - | - | 11,596.00 | - |
| 15 | ಇತರೆ ಮೂಲಗಳಿಂದ ಬರುವ ಆದಾಯ | 1,658.00 | **2,426.00** | **3,670.00** | **10,000.00** |
| | **ಒಟ್ಟು** | 49,97,318.00 | **1,22,30,855.00** | **1,61,84,688.00** | **32,50,000.00** |

## 2016–17ನೇ ಸಾಲಿನ ಅಂದಾಜು ಖರ್ಚುಗಳ ವಿವರ

| ಕ್ರ. ಸಂ | ಖರ್ಚುಗಳ ವಿವರ | 2013–14ನೇ ಸಾಲಿನ ಖರ್ಚು | 2014–15ನೇ ಸಾಲಿನ ಖರ್ಚು | 2015–16ನೇ ಸಾಲಿನ ಖರ್ಚು | 2016–17ನೇ ಸಾಲಿನ ನಿರೀಕ್ಷಿತ ಖರ್ಚು |
|---|---|---|---|---|---|
| 1 | ಅಧ್ಯಕ್ಷರ ಗೌರವಧನ, ಇತರೆ ಭತ್ಯೆ | 87,780.00 | **-** | **3,38,890.00** | **4,00,000.00** |
| 2 | ಆಯುಕ್ತರ ವೇತನ ಮತ್ತು ಇತರ ಭತ್ಯೆಗಳು (ಪ್ರಭಾರ ಭತ್ಯೆ) | 2,24,024.00 | 33,137.00 | **25,296.00** | **7,00,000.00** |
| 3 | ಸಿಬ್ಬಂದಿ ವೇತನ | 2,95,376.00 | 3,45,150.00 | **3,38,880.00** | **4,00,000.00** |
| 4 | ದೂರವಾಣಿ ವೆಚ್ಚ | 15,231.00 | 14,987.00 | **16,422.00** | **30,000.00** |
| 5 | ವಿದ್ಯುಚ್ಛಕ್ತಿ ವೆಚ್ಚ | 15,605.00 | 6,676.00 | **10,041.00** | **15,000.00** |

| | | | | | |
|---|---|---|---|---|---|
| 6 | ಪತ್ರಿಕಾ ಪ್ರಕಟಣೆ ವೆಚ್ಚ | 31,104.00 | 11,151.00 | **-** | **25,000.00** |
| 7 | ದಿನಪತ್ರಿಕೆ ಖರೀದಿ ವೆಚ್ಚ | 3,960.00 | - | **5,400.00** | **7,000.00** |
| 8 | ಪ್ರಯಾಣ ಭತ್ಯೆ | 16,215.00 | 2,930.00 | **2,500.00** | **10,000.00** |
| 9 | ಕಾರು ಖರೀದಿ/ಬಾಡಿಗೆ ವೆಚ್ಚ/ಇಂಧನ ವೆಚ್ಚ | 2,01,586.00 | 11,000.00 | **-** | **3,00,000.00** |
| 10 | ಮುದ್ರಣ ವೆಚ್ಚ | 17,500.00 | 19,500.00 | **20,820.00** | **25,000.00** |
| 11 | ವಕೀಲರ ಶುಲ್ಕ ಪಾವತಿ | - | 5,500.00 | **-** | **1,50,000.00** |
| 12 | ಸ್ಟೇಶನರಿ ಖರೀದಿ ಮತ್ತು ಕಛೇರಿ ಸಾಧಿಲ್ವಾರು ವೆಚ್ಚ | 21,074.00 | 25,220.00 | **21,863.00** | **30,000.00** |
| 13 | ಲೆಕ್ಕ ಪರಿಶೋಧನಾ ಶುಲ್ಕ ಪಾವತಿ | - | 32,263.00 | **21,107.00** | **50,000.00** |
| 15 | ರಾಷ್ಟ್ರೀಯ ಹಬ್ಬದ ವಂತಿಕೆ ಜಿಲ್ಲಾಧಿಕಾರಿಯವರಿಗೆ ಪಾವತಿ | 7,000.00 | 12,000.00 | **13,000.00** | **15,000.00** |
| 17 | ಸಭಾ ಉಪಾಹಾರ ವೆಚ್ಚ | 1,640.00 | 3,050.00 | **3,285.00** | **10,000.00** |
| 18 | ಅಂಚೆ ಚೀಟಿ ಖರೀದಿ | 2,000.00 | 3,000.00 | **2,000.00** | **5,000.00** |
| 19 | ಪಿಂಚಣಿ ವಂತಿಕೆ ಪಾವತಿ | 12,907.00 | - | **-** | **-** |
| 20 | ಕೆ.ಟಿ.ಸಿ.ಪಿ ಕಾಯ್ದೆ ಕಲಂ 18ರಲ್ಲಿ ಸಂಗ್ರಹಿಸಲಾದ ಶುಲ್ಕದ ಶೇ.5 ನಗರ ಯೋಜನಾ ಮಂಡಳಿಗೆ ಪಾವತಿ | - | 1,93,743.00 | **1,22,446.00** | **50,000.00** |
| 21 | ಮಾಸ್ಟರ್ ಪ್ಲ್ಯಾನ್ ತಯಾರಿಸಲು ಹೊರ ಗುತ್ತಿಗೆ ನೀಡಿರುವ ಬಾಬ್ತು ಆಗುವ ವೆಚ್ಚ | 3,60,000.00 | **-** | **-** | **-** |
| 22 | ಕಂಪ್ಯೂಟರ್ ಮತ್ತು ಅದಕ್ಕೆ ಸಂಬಂಧಪಟ್ಟ ಸಲಕಣೆಗಳು, ಜೆರಾಕ್ಸ್ ಮಿಷನ್, ಯು.ಪಿ.ಎಸ್, ಪ್ರಿಂಟರ್ ಮತ್ತು ಫ್ಯಾಕ್ಸ್ ಮಿಷಿನ್ ಖರೀದಿ ವೆಚ್ಚ/ ವೆಬ್ ಸೈಟ್ ನವೀಕರಣ ಮತ್ತು ನಿರ್ವಹಣೆ | 99,147.00 | 14,866.00 | **35,183.00** | **50,000.00** |
| 23 | ಟಿ.ಡಿ.ಎಸ್. ಪಾವತಿ (ಗದ್ದಿಗೆ + ಇತರೆ) | 56,121.00 | 16,429.00 | **41,480.00** | **2,00,000.00** |
| 24 | ಸೇಲ್ಸ್ ಟ್ಯಾಕ್ಸ್ ಪಾವತಿ (ಗದ್ದಿಗೆ + ಇತರೆ) | - | 19,605.00 | **82,961.00** | **1,00,000.00** |
| 25 | ಕಾರ್ಮಿಕ ಕಲ್ಯಾಣ ನಿಧಿಗೆ ಪಾವತಿ (ಗದ್ದಿಗೆ + ಇತರೆ) | - | - | **25,642.00** | **50,000.00** |
| 26 | ರಾಯಲ್ಟಿ (ಗದ್ದಿಗೆ + ಇತರೆ) | - | - | **9,605.00** | **25,000.00** |
| 27 | ಗದ್ದಿಗೆಯಲ್ಲಿ ಉದ್ಯಾನವನ ಅಭಿವೃದ್ಧಿ/ನಿರ್ವಹಣೆ, ಹೆಚ್ಚುವರಿ ಕಾಮಗಾರಿ, ವಿದ್ಯುತ್‌ಚ್ಚಕ್ತಿ ಬಿಲ್ ಪಾವತಿ ಮತ್ತು ಇತರೆ ವೆಚ್ಚ | 6,24,095.00 | 7,32,532.00 | **17,82,323.00** | **5,00,000.00** |
| 28 | ಕೆರೆ ಅಭಿವೃದ್ಧಿ ಪಡಿಸಲು ಆಗುವ ವೆಚ್ಚ | - | - | **-** | **50,00,000.00** |

| | | | | | |
|---|---|---|---|---|---|
| 29 | ಕೆರೆ ಅಭಿವೃದ್ಧಿ ಶುಲ್ಕ ಇಂಡಿಯನ್ ಬ್ಯಾಂಕ್‌ನಿಂದ ಹೆಚ್.ಡಿ.ಎಫ್.ಸಿ ಬ್ಯಾಂಕ್‌ಗೆ ವರ್ಗಾವಣೆ ಮಾಡಿರುವುದು | - | 31,12,000.00 | **-** | - |
| 30 | ಕೆರೆ ಅಭಿವೃದ್ಧಿ ಶುಲ್ಕ ಹೆಚ್.ಡಿ.ಎಫ್.ಸಿ ಬ್ಯಾಂಕ್‌ನಿಂದ ಕಾವೇರಿ ಗ್ರಾಮೀಣ ಬ್ಯಾಂಕ್‌ಗೆ ವರ್ಗಾವಣೆ | - | - | **83,42,245.45** | - |
| 31 | ಕೆರೆ ಅಭಿವೃದ್ಧಿ ಶುಲ್ಕ ಕಾವೇರಿ ಗ್ರಾಮೀಣ ಬ್ಯಾಂಕ್‌ನಿಂದ ವಿಜಯ ಬ್ಯಾಂಕ್‌ಗೆ ವರ್ಗಾಯಿಸಿ ವಿಜಯ ಬ್ಯಾಂಕಿನಲ್ಲಿ ಠೇವಣಿ ಹೂಡಿರುವುದು | - | - | **50,00,000.00** | - |
| 32 | ಇತರೆ ವೆಚ್ಚ | 444.00 | 60.00 | **160.00** | **2,000.00** |
| | ಒಟ್ಟು | **20,92,809.00** | **46,14,799.00** | **1,62,61,549.00** | **81,49,000.00** |

**<u>ಘೋಶ್ವಾರೆ:</u>**

| | | | |
|---|---|---|---|
| | **2015–16ನೇ ಸಾಲಿನ ವಾರ್ಷಿಕ ಘೋಶ್ವಾರೆ** | | |
| 1. | **2015–16ನೇ ಸಾಲಿನ ಆರಂಭಿಕ ಶಿಲ್ಕು** | **ರೂ.** | **1,63,67,727.00** |
| 2. | 2015–16ನೇ ಸಾಲಿನ ಜಮೆ | ರೂ. | 1,61,84,688.00 |
| 3. | **2015–16ನೇ ಸಾಲಿನ ಒಟ್ಟು ಜಮೆ** | **ರೂ.** | **3,25,52,415.00** |
| 4. | 2015–16ನೇ ಸಾಲಿನ ಖರ್ಚು | ರೂ. | 1,62,61,549.00 |
| 5. | **2015–16ನೇ ಸಾಲಿನ ಅಖೈರು ಶಿಲ್ಕು (31.03.2016ರ ಅಂತ್ಯಕ್ಕೆ)** | **ರೂ.** | **1,62,90,866.00** |
| | **2016–17ನೇ ಸಾಲಿನ ಅಂದಾಜು ಆಯವ್ಯಯದ ಘೋಶ್ವಾರೆ ವಿವರ** | | |
| **1.** | **2016–17ನೇ ಸಾಲಿನ ಆರಂಭಿಕ ಶಿಲ್ಕು** | **ರೂ.** | **1,62,90,866.00** |
| 2. | 2016–17ನೇ ಸಾಲಿನ ಅಂದಾಜು ಜಮೆ | ರೂ. | 32,50,000.00 |
| **3.** | **2016–17ನೇ ಸಾಲಿನ ಅಂದಾಜು ಒಟ್ಟು ಜಮೆ** | **ರೂ.** | **1,95,40,866.00** |
| 4. | 2016–17ನೇ ಸಾಲಿನ ಅಂದಾಜು ಖರ್ಚು | ರೂ. | 81,49,000.00 |
| **5.** | **2016–17ನೇ ಸಾಲಿನ ಅಂದಾಜು ಅಖೈರು ಶಿಲ್ಕು** | **ರೂ.** | **1,13,91,866.00** |
| 6. | 2016–17ನೇ ಸಾಲಿನಲ್ಲಿ ಅಂದಾಜು ಹೂಡಿಕೆ ಮೊಬಲಗು. | ರೂ. | 1,44,73,148.00 |
| | ಒಟ್ಟು | **ರೂ.** | **2,58,65,014.00** |

ಈ ಮೇಲಿನ ಅಂದಾಜು ಆಯವ್ಯಯ (ಬಡ್ಜೆಟ್ ಮಂಡನೆ) ಯನ್ನು ಸಭಾ ಅಂಗೀಕಾರಕ್ಕಾಗಿ ಸಲ್ಲಿಸಿದೆ.

**<u>ನಿರ್ಣಯ:–</u>** ಮಂಡಿಸಿರುವ 2016–17ನೇ ಸಾಲಿನ ಅಂದಾಜು ಆಯವ್ಯಯದ ಬಗ್ಗೆ ಸಭೆಯಲ್ಲಿ ಚರ್ಚಿಸಿ, ಸದರಿ ಆಯವ್ಯಯಕ್ಕೆ ಸಭೆಯು ಸರ್ವಾನುಮತದ ಆಡಳಿತಾತ್ಮಕ ಅಂಗೀಕಾರ ನೀಡಿ ಸಕ್ಷಮ ಪ್ರಾಧಿಕಾರದಿಂದ (ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ) ಮಂಜೂರಾತಿ ಪಡೆದುಕೊಳ್ಳುವಂತೆ ತೀರ್ಮಾನಿಸಲಾಯಿತು.

**<u>4)ವಿಷಯಸಂಖ್ಯೆ 4: ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರುರವರ ಪತ್ರ ಸಂಖ್ಯೆ: ನಗ್ರಾಯೋನಿ/ಕಟ್ಟಡಪರವಾನಿಗೆ/ಸುತ್ತೋಲೆ/2015–16, ದಿನಾಂಕ:22.01.2016ರಲ್ಲಿ ನೀಡಿರುವ ಸುತ್ತೋಲೆ ಬಗ್ಗೆ.</u>**

**ಟಿಪ್ಪಣಿ:–** ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯನ್ವಯ ನಗರ/ಪಟ್ಟಣಗಳಿಗೆ ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸುವ ಪೂರ್ವದಲ್ಲಿ ಅಥವಾ ನಂತರದಲ್ಲಿ ಭೂ ಪರಿವರ್ತನೆಯಾದ ಜಮೀನುಗಳನ್ನು ವಿಭಜಿಸಿ, ಸ್ಥಳೀಯ ಸಂಸ್ಥೆಯಲ್ಲಿ ಖಾತೆ ತೆರೆದಿರುವ ನಿವೇಶನಗಳಿಗೆ ಕಟ್ಟಡ ನಿರ್ಮಾಣ ಮಾಡುವ ಸಂದರ್ಭ ತಾಂತ್ರಿಕ ಅಭಿಪ್ರಾಯ ನೀಡುವ ಬಗ್ಗೆ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಕರು, ಬೆಂಗಳೂರುರವರು ಪ್ರಾಧಿಕಾರಗಳಿಂದ ವಿನ್ಯಾಸ ನಕ್ಷೆ ಅನುಮೋದನೆ ಪಡೆಯದೆ ಅನಧಿಕೃತವಾಗಿ ವಿಭಜಿಸಿ, ಸ್ಥಳೀಯ ಸಂಸ್ಥೆಯಲ್ಲಿ ಖಾತೆ ತೆರೆದಿರುವ ನಿವೇಶನಗಳಿಗೆ ಕಟ್ಟಡ ನಿರ್ಮಾಣ ಮಾಡುವ ಸಂಬಂಧ ತಾಂತ್ರಿಕ ಅಭಿಪ್ರಾಯ ನೀಡಬಾರದೆಂದು ಸೂಚಿಸಲಾಗಿರುತ್ತದೆ ಹಾಗೂ ಇಂತಹ ಪ್ರಕರಣಗಳನ್ನು ಅಕ್ರಮ ಸಕ್ರಮ ಯೋಜನೆಯಡಿ ಪರಿಶೀಲಿಸಬಹುದಾಗಿ ತಿಳಿಸಲಾಗಿರುತ್ತದೆ. ಈ ಸುತ್ತೋಲೆಯನ್ವಯ ಮಡಿಕೇರಿ ನಗರಸಭೆ ವ್ಯಾಪ್ತಿಯಲ್ಲಿ ಪ್ರಾಧಿಕಾರದಿಂದ ವಿನ್ಯಾಸ ಅನುಮೋದನೆ ಪಡೆಯದೆ ಖಾತೆಯಾಗಿರುವ ಪ್ರಕರಣಗಳೆ ಅಧಿಕವಾಗಿರುವುದರಿಂದ ಸುತ್ತೋಲೆಯನ್ವಯ ಕ್ರಮ ಕೈಗೊಳ್ಳುವುದು ಕಷ್ಟಸಾಧ್ಯವಾಗಿರುತ್ತದೆ. ಈ ವಿಷಯವನ್ನು ಸಭೆಯ ಅವಗಾಹನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಈ ಮೇಲಿನ ಸುತ್ತೋಲೆಯನ್ನು ಆಯುಕ್ತರು ಸಭೆಯಲ್ಲಿ ಓದಿ ವಿವರಿಸಿದರು ಹಾಗೂ ಭೂ ಪರಿವರ್ತನೆಯಾದ ನಂತರ ಅನಧಿಕೃತವಾಗಿ ವಿಭಜನೆ ಮಾಡಿ ಸ್ಥಳೀಯ ಸಂಸ್ಥೆಗಳಲ್ಲಿ ಖಾತೆಯಾಗಿರುವ ನಿವೇಶನ ಎಂದು ಕಂಡುಬಂದಲ್ಲಿ ಇಂತಹ ನಿವೇಶನಗಳಲ್ಲಿ ಕಟ್ಟಡ ನಿರ್ಮಿಸಲು ಪ್ರಾಧಿಕಾರದಿಂದ ತಾಂತ್ರಿಕ ಅಭಿಪ್ರಾಯವನ್ನು ನೀಡುವುದಿಲ್ಲ. ಆದರೆ ತೀರಾ ಹಳೆಯ ಕಟ್ಟಡ ಅಥವಾ ಈ ಕಚೇರಿಯಿಂದ ಈ ಮೊದಲು ಕಟ್ಟಡ ನಿರ್ಮಿಸಲು ಅನುಮೋದನೆ ನೀಡಿದ್ದರೆ ಅಂತಹ ಕಟ್ಟಡದ ಮೇಲೆ ಮೊದಲ ಅಥವಾ ಎರಡನೇ ಅಂತಸ್ತಿನ ಕಟ್ಟಡ ನಿರ್ಮಿಸಲು ತಾಂತ್ರಿಕ ಅನುಮೋದನೆ ಕೋರಿದಲ್ಲಿ ವಲಯನಿಯಾಮಾವಳಿಗಳನ್ವಯ ಕ್ರಮ ವಹಿಸಲಾಗುವುದು. ಇದನ್ನು ಹೊರತುಪಡಿಸಿ ಸುತ್ತೋಲೆಯನ್ವಯ ಕ್ರಮ ವಹಿಸಲಾಗುವುದು ಎಂದು ಸಭೆಯಲ್ಲಿ ಮಾಹಿತಿಯನ್ನು ನೀಡಿದರು. ಇದಕ್ಕೆ ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**<u>5)ವಿಷಯಸಂಖ್ಯೆ 5 :</u> ಕಚೇರಿ ಉಪಯೋಗಕ್ಕೆ (ತಾಂತ್ರಿಕ ವಿಭಾಗ) ಅತ್ಯಾವಶ್ಯಕವಾಗಿರುವ ಒಂದು ಗೋಡ್‌ರೇಜ್ ಬೀರು ಮತ್ತು ಟೇಬಲ್ ಖರೀದಿಸಲು ಸಭಾ ಅನುಮೋದನೆಗಾಗಿ ಮಂಡಿಸಿದೆ.**

**ನಿರ್ಣಯ:–** ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**<u>6)ವಿಷಯ ಸಂಖ್ಯೆ 6 :– ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ನೀರಿನ ಮೂಲಗಳನ್ನು ಗುರುತಿಸಿ ಕೆರೆ ಅಥವಾ ಕುಡಿಯುವ ನೀರಿನ ಟ್ಯಾಂಕ್ ನಿರ್ಮಿಸುವ ಬಗ್ಗೆ.</u>**

**ಟಿಪ್ಪಣಿ:–** ಮಡಿಕೇರಿ ನಗರಕ್ಕೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಿಕೊಡುವ ನಿಟ್ಟಿನಲ್ಲಿ ಮಡಿಕೇರಿ ನಗರದ ಮಹಾಯೋಜನೆಯಲ್ಲಿ ಗುರುತಿಸಿರುವ ಹಾಗೂ ನಗರಸಭಾ ವ್ಯಾಪ್ತಿಯಲ್ಲಿ ಬರುವ ಕೆರೆ, ಜಲ ಮೂಲಗಳು, ಹಾಲಿ ಇರುವ ಬೋರ್‌ವೆಲ್‌ಗಳನ್ನು ಗುರುತಿಸಿ ಇವುಗಳನ್ನು ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರವು ಖಾಸಗಿ ವಿನ್ಯಾಸ ಅನುಮೋದನೆ ನೀಡುವ ಸಂದರ್ಭದಲ್ಲಿ ಪಾವತಿಸಿಕೊಳ್ಳುತ್ತಿರುವ ಕೆರೆ ಅಭಿವೃದ್ಧಿ ಶುಲ್ಕದಿಂದ ಅಭಿವೃದ್ಧಿ ಪಡಿಸುವ ಯೋಜನೆಯನ್ನು ಹಮ್ಮಿಕೊಳ್ಳುವ ನಿಟ್ಟಿನಲ್ಲಿ ಕರ್ಣಂಗೇರಿ ಗ್ರಾಮದ ಸರ್ವೆ ನಂಬರ್ 292/1 ರಲ್ಲಿನ ಸರ್ಕಾರಿ ಜಮೀನಿನಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಕುಡಿಯುವ ನೀರನ್ನು ಒದಗಿಸುವ ನಿಟ್ಟಿನಲ್ಲಿ ಕೆರೆ ಅಥವಾ ಕುಡಿಯುವ ನೀರಿಗೆ ಸಂಬಂಧಿಸಿದಂತೆ ನೀರಿನ ಟ್ಯಾಂಕ್ ನಿರ್ಮಿಸುವುದು ಅಥವಾ ನೀರು ಸರಬರಾಜು/ ಅಗತ್ಯವಿರುವ ಇತರೆ ಉದ್ದೇಶಕ್ಕೆ ಅಭಿವೃದ್ಧಿ ಪಡಿಸುವ ಯೋಜನೆಯನ್ನು ಹಮ್ಮಿಕೊಳ್ಳಲು ಪ್ರಸ್ತಾವನೆಯನ್ನು ಮಾನ್ಯ ಜಿಲ್ಲಾಧಿಕಾರಿಯವರ ಮೂಲಕ ಸರ್ಕಾರದ ಅನುಮೋದನೆಗಾಗಿ ಸಲ್ಲಿಸುವ ಬಗ್ಗೆ ಸಭಾ ಅನುಮೋದನೆಗಾಗಿ ಮಂಡಿಲಾಗಿದೆ.

**ನಿರ್ಣಯ:–** ಪ್ರಸ್ತಾವನೆ ಬಗ್ಗೆ ಪ್ರಾಧಿಕಾರದ ಅಧ್ಯಕ್ಷರು ವಿವರಿಸುತ್ತಾ, ಪ್ರಸ್ತಾವಿತ ಸ್ಥಳವನ್ನು ಪರಿಶೀಲನೆ ಮಾಡಿದ್ದು, ಸರ್ಕಾರಿ ಜಾಗವು ಈಗಾಗಲೇ ಒತ್ತುವರಿಯಾಗಿರುವುದರಿಂದ ಒತ್ತುವರಿಯನ್ನು ತೆರವುಗೊಳಿಸಲು ಕೋರಿ ಮಾನ್ಯ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯುವುದು ಮತ್ತು ತೆರವುಗೊಳಿಸಿದ ನಂತರ ಪ್ರಾಧಿಕಾರಕ್ಕೆ ಸದರಿ ಜಮೀನನ್ನು ಹಸ್ತಾಂತರ ಮಾಡಿಕೊಡುವಂತೆ ಕೋರುವುದು,

ಮಾನ್ಯ ಜಿಲ್ಲಾಧಿಕಾರಿಗಳು ಪ್ರಾಧಿಕಾರಕ್ಕೆ ಹಸ್ತಾಂತರ ಮಾಡಿದ ಮೇಲೆ ಮುಂದಿನ ಪ್ರಾಧಿಕಾರದ ಸಭೆಯಲ್ಲಿಟ್ಟು ಸಭಾ ನಿರ್ಣಯದಂತೆ ಕ್ರಮ ಕೈಗೊಳ್ಳಬಹುದೆಂದು ತಿಳಿಸಿರುವುದನ್ನು ಸಭೆಯು ಒಪ್ಪಿ ಅದರಂತೆ ಕ್ರಮ ಕೈಗೊಳ್ಳಬಹುದೆಂದು ತೀರ್ಮಾನಿಸಿತು.

**<u>7)ವಿಷಯ ಸಂಖ್ಯೆ 7:- ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಕಟ್ಟಡವನ್ನು ನಿರ್ಮಿಸಲು ನಗರಸಭಾ ವ್ಯಾಪ್ತಿಯಲ್ಲಿ ಜಾಗ ಮಂಜೂರು ಮಾಡಿಕೊಡುವ ಬಗ್ಗೆ.</u>**

**ಟಿಪ್ಪಣಿ:-** ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರವು ಪ್ರಾದೇಶಿಕ ಆಯುಕ್ತರ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಕಟ್ಟಡ ಹಳೆಯ ವೇ ಬ್ರಿಡ್ಜ್ ಬಿಲ್ಡಿಂಗ್‌ನ್ನು ಪ್ರಾಧಿಕಾರದ ವತಿಯಿಂದ ತಾತ್ಕಾಲಿಕವಾಗಿ ದುರಸ್ಥಿ ಪಡಿಸಿಕೊಂಡು ಕಚೇರಿಯನ್ನು ನಡೆಸುತ್ತಿರುವುದಾಗಿದೆ. ಈ ಕಟ್ಟಡವು ತುಂಬಾ ಶಿಥಿಲವಾಗಿದ್ದು ಮತ್ತು ಅತ್ಯಂತ ಚಿಕ್ಕದಾಗಿರುವುದರಿಂದ ಸಭಾ ಕಾರ್ಯಕ್ರಮಗಳನ್ನು ನಡೆಸಲು ಹಾಗೂ ಕಡತಗಳನ್ನು ಸುಸ್ಥಿತಿಯಲ್ಲಿ ಇಡಲು ರೆಕಾರ್ಡ್ ರೂಂ ಸಹ ಅವಶ್ಯಕತೆ ಇದ್ದು, ಈ ಎಲ್ಲವನ್ನು ಈ ಕಚೇರಿಯಲ್ಲಿ ಅಳವಡಿಸುವುದು ಕಷ್ಟಸಾಧ್ಯವಾಗಿರುವುದರಿಂದ ಪ್ರಾಧಿಕಾರ ಕಚೇರಿಗೆ ಬೇರೆ ಕಟ್ಟಡದ ಅವಶ್ಯಕತೆ ತುಂಬಾ ಇರುವುದರಿಂದ ನಗರಸಭಾ ವ್ಯಾಪ್ತಿಯಲ್ಲಿ ಬರುವ ಯಾವುದೇ ಸರ್ಕಾರಿ ಜಮೀನನ್ನು ಮಂಜೂರು ಮಾಡಿಕೊಡಲು ಮಾನ್ಯ ಜಿಲ್ಲಾಧಿಕಾರಿಯವರನ್ನು ಕೋರಿರುವ ಬಗ್ಗೆ ಪ್ರಸ್ತಾವನೆಯನ್ನು ಸಭೆಯಲ್ಲಿ ಮಂಡಿಸಿದೆ.

**ನಿರ್ಣಯ:-** ಸದರಿ ಪ್ರಸ್ತಾವನೆ ಬಗ್ಗೆ ನಗರಸಭಾ ಆಯುಕ್ತರು ಪ್ರತಿಕ್ರಿಯೆ ನೀಡುತ್ತಾ, ಮಡಿಕೇರಿ ಪಟ್ಟಣದೊಳಗೆ ಕಚೇರಿ ಕಟ್ಟಡವನ್ನು ನಿರ್ಮಿಸಲು ಯೋಗ್ಯವಾದ ಜಾಗವು ಲಭ್ಯವಿರುವ ಬಗ್ಗೆ ನಗರಸಭೆಯಲ್ಲಿ ಪರಿಶಿಲಿಸಿ, ಮಾಹಿತಿಯನ್ನು ನೀಡುವುದಾಗಿ ತಿಳಿಸಿದರು. ಮಾಹಿತಿಯನ್ನು ನೀಡಿದ ನಂತರದಲ್ಲಿ ಜಂಟಿಯಾಗಿ ಸ್ಥಳ ಪರಿಶೀಲಿಸಿ, ವಿವರವಾದ ವರದಿಯೊಂದಿಗೆ ಸದರಿ ಪ್ರಸ್ತಾವನೆಗೆ ಮಾನ್ಯ ಜಿಲ್ಲಾಧಿಕಾರಿಯವರಿಂದ ಮಂಜೂರಾತಿಯನ್ನು ಪಡೆದುಕೊಳ್ಳುವಂತೆ ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**<u>8)ವಿಷಯಸಂಖ್ಯೆ 8:- ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಅಭಿವೃದ್ಧಿ ಪಡಿಸಿರುವ ಗದ್ದಿಗೆ ಉದ್ಯಾನವನದಲ್ಲಿ ಹೆಚ್ಚುವರಿ ಕಾಮಗಾರಿಗಳನ್ನು ಅಳವಡಿಸಿ ಉದ್ಯಾನವನವನ್ನು ನಿರ್ವಹಿಸಲು ರಾಜಸೀಟ್ ಅಭಿವೃದ್ಧಿ ಪ್ರಾಧಿಕಾರ (ಜಿಲ್ಲಾ ತೋಟಗಾರಿಕಾ ಇಲಾಖೆ)ರವರಿಗೆ ಹಸ್ತಾಂತರಿಸುವ ಬಗ್ಗೆ.</u>**

**<u>ಟಿಪ್ಪಣಿ:-</u>**ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಅಂದಾಜು 5.00ಎಕರೆ ಜಮೀನಿನಲ್ಲಿ ಈಗಾಗಲೇ ಅಭಿವೃದ್ಧಿ ಪಡಿಸಿರುವ ಗದ್ದಿಗೆ ಉದ್ಯಾನವನದಲ್ಲಿ ಹೆಚ್ಚುವರಿ ಅಭಿವೃದ್ಧಿ ಕಾಮಗಾರಿಗಳಾದ ತುಂತುರು ಹನಿ ನೀರಾವರಿ ವ್ಯವಸ್ಥೆಯನ್ನು ಅಳವಡಿಸಿ, ಹೆಚ್ಚಿನ ಹೂವಿನ ಗಿಡಗಳನ್ನು ಹಾಕಿ ಮಕ್ಕಳ ಆಟಿಕೆಗಳಾದ ಉಯ್ಯಾಲೆ, ಜಾರುಬಂಡಿ ಇನ್ನಿತರ ಸಾಮಾಗ್ರಿಗಳನ್ನು ಅಳವಡಿಸಿ ಕಾವಲುಗಾರರ ಕೊಠಡಿ, ಶೌಚಾಲಯ ಹಾಗೂ ಉಪಹಾರ ಮಂದಿರ ಇವುಗಳನ್ನು ಅಂದಾಜು 26.40ಲಕ್ಷಗಳಲ್ಲಿ ನಿರ್ಮಿಸಲು ತಾಂತ್ರಿಕ ಪ್ರಾಧಿಕಾರವಾದ ಸೂಪರಿಂಟೆಂಡಿಂಗ್ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, ಮಂಗಳೂರು ವೃತ್ತ ಮಂಗಳೂರುರವರು ನೀಡಿರುವ ತಾಂತ್ರಿಕ ಅನುಮೋದನೆ ಹಾಗೂ ಸರ್ಕಾರದ ಪತ್ರ ಸಂಖ್ಯೆ ನಅಇ/103/ಮೈಅಪ್ರಾ/2014, ದಿನಾಂಕ:21.05.2014ರಂದು ನೀಡಿರುವ ಆಡಳಿತಾತ್ಮಕ ಮಂಜೂರಾತಿಯೊಂದಿಗೆ ರೂ.26.40 ಲಕ್ಷ ವೆಚ್ಚದಲ್ಲಿ ಹೆಚ್ಚುವರಿಯಾಗಿ ಈ ಮೇಲಿನ ಎಲ್ಲಾ ಕಾಮಗಾರಿಗಳನ್ನು ನಿರ್ವಹಿಸಲು ಗುತ್ತಿಗೆದಾರರಾದ ಶ್ರೀ ಸದಾಶಿವ ರೈ ರವರಿಗೆ ಕಾರ್ಯಾದೇಶವನ್ನು ನಿಡಿರುವಂತೆ ಸದರಿಯವರು ಕಾಮಗಾರಿಗಳನ್ನು ಪೂರ್ಣಗೊಳಿಸಿದ ನಂತರ ಸದರಿಯವರಿಗೆ 1ನೇ , 2ನೇ, 3ನೇ ಮತ್ತು 4ನೇ ಹಂತವಾಗಿ ಒಟ್ಟು ರೂ. 25,64,142/-ರಲ್ಲಿ ಸೇಲ್ಸ್ ಟ್ಯಾಕ್ಸ್, ಟಿ.ಡಿ.ಎಸ್, ಕಾರ್ಮಿಕರ ಕಲ್ಯಾಣ ನಿಧಿ ಮತ್ತು ರಾಯಲ್ಟಿ ಹೀಗೆ ಒಟ್ಟು ರೂ. 1,89,096/-ಕಡಿತಗೊಳಿಸಿ ಹಾಗೂ ಭದ್ರತಾ ಠೇವಣಿ ರೂ. 1,32,000/- ಮತ್ತು ಇ.ಎಂ.ಡಿ. ಹಣ ರೂ. 68,000/-ಗಳನ್ನು ಉಳಿಸಿಕೊಂಡು ಉಳಿದ ರೂ. 23,75,046/-ಮಾತ್ರವನ್ನು ಗುತ್ತಿಗೆದಾರರಿಗೆ ಪಾವತಿಸಲಾಗಿರುತ್ತದೆ. ದಿನಾಂಕ: 29.05.2014ರಂದು ನಡೆದ ಪ್ರಾಧಿಕಾರದ ಸಭೆಯಲ್ಲಿ ಹೆಚ್ಚುವರಿ ಕಾಮಗಾರಿಗಳನ್ನು ಅಳವಡಿಸಿ, ಗದ್ದಿಗೆ ಉದ್ಯಾನವನ ನಿರ್ವಹಣೆಯನ್ನು ರಾಜಸೀಟು ಅಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸಲು ತೀರ್ಮಾನಿಸಿರುವಂತೆ ಮಾನ್ಯ ಜಿಲ್ಲಾಧಿಕಾರಿಯವರ ಪತ್ರ

ಸಂಖ್ಯೆ:ಪ್ರವಾಸೋದ್ಯಮ/48/10-11, ದಿನಾಂಕ:24.06.2014ರಂದು ಸದಸ್ಯ ಕಾರ್ಯದರ್ಶಿ, ರಾಜಸೀಟ್ ಅಭಿವೃದ್ಧಿ ಪ್ರಾಧಿಕಾರ, ಕೊಡಗು ಜಿಲ್ಲೆ, ಮಡಿಕೇರಿರವರಿಗೆ ಅಧಿಕೃತ ಜ್ಞಾಪನಾ ಪತ್ರದಲ್ಲಿ ಜುಲೈ 2014ರಿಂದ ಮಡಿಕೇರಿ ನಗರದಲ್ಲಿರುವ ರಾಜರ ಗದ್ದುಗೆ ಉದ್ಯಾನವನ ನಿರ್ವಹಣೆಯನ್ನು ರಾಜಸೀಟ್ ಅಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸಿ ಆದೇಶಿಸಿದೆ. ಅದರಂತೆ ಈ ಪ್ರಾಧಿಕಾರದ ಪತ್ರ ಸಂಖ್ಯೆ:ಮನಅಪ್ರಾ/ಗದ್ದಿಗೆಉದ್ಯಾ.ನಿರ್ವ/01/2014-15, ದಿನಾಂಕ: 04.08.2014ರಂದು ಪತ್ರ ಬರೆದು ಮಾನ್ಯ ಜಿಲ್ಲಾಧಿಕಾರಿಯವರ ಅಧಿಕೃತ ಜ್ಞಾಪನಾ ಪತ್ರದ ಆದೇಶದಂತೆ ಮಡಿಕೇರಿ ಗದ್ದಿಗೆ ಉದ್ಯಾನವನವನ್ನು ರಾಜಸೀಟ್ ಅಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸಿ, ಜುಲೈ 2014ರಿಂದಲೇ ನಿರ್ವಹಿಸುವಂತೆಯೇ ಕೋರಲಾಗಿರುತ್ತದೆ. ತದನಂತರದಿಂದ ಪ್ರಾಧಿಕಾರವು ಗದ್ದಿಗೆ ಉದ್ಯಾನವನವನ್ನು ನಿರ್ವಹಿಸುತ್ತಿಲ್ಲ.

ಹಾಲಿ ಗದ್ದಿಗೆ ಉದ್ಯಾನವನದಲ್ಲಿ ಹೆಚ್ಚುವರಿ ಕಾಮಗಾರಿಗಳಾದ ತುಂತುರು ಹನಿ ನೀರಾವರಿ ವ್ಯವಸ್ಥೆ, ಹೆಚ್ಚಿನ ಹೂವಿನ ಗಿಡಗಳನ್ನು ನೆಟ್ಟು, ಉದ್ಯಾನವನದಲ್ಲಿ ಮಕ್ಕಳ ಆಟಿಕೆ ಸಾಮಾಗ್ರಿಗಳು, ಕಾವಲುಗಾರರ ಕೊಠಡಿ, ಶೌಚಾಲಯ ಹಾಗೂ ಉಪಹಾರ ಮಂದಿರ ಇವುಗಳನ್ನು ಅಳವಡಿಸಿ ಪೂರ್ಣಗೊಳಿಸಲಾಗಿದ್ದು, ಇವುಗಳನ್ನು ಸಹ ನಿರ್ವಹಣೆಗಾಗಿ ರಾಜಸೀಟ್ ಅಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸುವ ಬಗ್ಗೆ ಸಭೆಯ ಅನುಮೋದನೆಗಾಗಿ ಮಂಡಿಲಾಗಿದೆ.

**ನಿರ್ಣಯ:-** ದಿನಾಂಕ:29.05.2014ರಂದು ನಡೆದ ಪ್ರಾಧಿಕಾರದ ಸಾಮಾನ್ಯ ಸಭೆಯಲ್ಲಿ ಗದ್ದುಗೆ ಉದ್ಯಾನವನದಲ್ಲಿ ಹೆಚ್ಚುವರಿ ಅಭಿವೃದ್ಧಿ ಕಾಮಗಾರಿಗಳಾದ ತುಂತುರು ಹನಿ ನೀರಾವರಿ ವ್ಯವಸ್ಥೆ, ಹೆಚ್ಚಿನ ಅಲಂಕಾರಿಕ ಮತ್ತು ಹೂವಿನ ಗಿಡಗಳನ್ನು ನೆಟ್ಟು, ಉದ್ಯಾನವನದಲ್ಲಿ ಮಕ್ಕಳ ಆಟಿಕೆ ಸಾಮಾಗ್ರಿಗಳು, ಕಾವಲುಗಾರರ ಕೊಠಡಿ, ಶೌಚಾಲಯ ಹಾಗೂ ಉಪಹಾರ ಮಂದಿರ ಇವುಗಳನ್ನು ಅಳವಡಿಸಿ ನಿರ್ವಹಿಸಲು ರಾಜಸೀಟ್ ಅಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸಲು ತೀರ್ಮಾನಿಸಿರುವಂತೆ ಹಾಗೂ ಮಾನ್ಯ ಜಿಲ್ಲಾಧಿಕಾರಿಯವರು ಅವರ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಪ್ರವಾಸೋದ್ಯಮ/48/10-11, ದಿನಾಂಕ:24.06.2014ರಲ್ಲಿ ಮಡಿಕೇರಿ ನಗರದಲ್ಲಿರುವ ರಾಜರ ಗದ್ದಿಗೆ ಉದ್ಯಾನವನದ ನಿರ್ವಹಣೆಯನ್ನು ಜುಲೈ 2014ರಿಂದಲೇ ಅನ್ವಯವಾಗುವಂತೆ ರಾಜಸೀಟ್ ಅಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸಿ ಆದೇಶಿಸಲಾಗಿರುತ್ತದೆ ಎಂಬ ಮಾಹಿತಿಯನ್ನು ಸಭೆಯಲ್ಲಿ ಆಯುಕ್ತರು ವಿವರಿಸುತ್ತಾ, ಈಗಾಗಲೇ ಗದ್ದುಗೆ ಉದ್ಯಾನವನದಲ್ಲಿ ಹೆಚ್ಚುವರಿ ಕಾಮಗಾರಿಗಳು ಪೂರ್ಣಗೊಂಡಿದ್ದು, ಕೂಡಲೇ ರಾಜಸೀಟು ಅಭಿವೃದ್ಧಿ ಪ್ರಾಧಿಕಾರಕ್ಕೆ ಉದ್ಯಾನವನದ ನಿರ್ವಹಣೆ ಮಾಡಲು ಹಸ್ತಾಂತರಿಸಬೇಕಾಗಿರುತ್ತದೆ ಎಂದು ಮಾಹಿತಿಯನ್ನು ನೀಡಿದರು.

ಇದಕ್ಕೆ ಸಭೆಯು ಒಪ್ಪಿ ರಾಜಸೀಟು ಅಭಿವೃದ್ಧಿ ಪ್ರಾಧಿಕಾರಕ್ಕೆ ಗದ್ದುಗೆ ಉದ್ಯಾನವನವನ್ನು ನಿರ್ವಹಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಆಯುಕ್ತರಿಗೆ ಸೂಚಿಸಿ, ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**9)ವಿಷಯ ಸಂಖ್ಯೆ 9:-** 1. ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ವಾಣಿಜ್ಯ ಕಟ್ಟಡ ನಿರ್ಮಿಸಲು ನೀಡಿರುವ ತಾಂತ್ರಿಕ ಅನುಮೋದನೆಯಲ್ಲಿ ವಾಹನ ನಿಲುಗಡೆ ಮತ್ತು ಪಾರ್ಕಿಂಗ್‌ಗಾಗಿ ಜಾಗವನ್ನು ಕಾಯ್ದಿರಿಸಿರುವಂತೆ, ಜಾಗವನ್ನು ಬಿಡದೆ ನಕ್ಷೆಯನ್ನು ಉಲ್ಲಂಘಿಸಿ, ಕಟ್ಟಡ ನಿರ್ಮಿಸಿರುವುದು/ನಿರ್ಮಿಸುತ್ತಿರುವ ಬಗ್ಗೆ.

2. ಈ ಪ್ರಾಧಿಕಾರದಿಂದ ಕಟ್ಟಡ ನಿರ್ಮಿಸಲು ತಾಂತ್ರಿಕ ಅನುಮೋದನೆಯನ್ನು ಪಡೆದುಕೊಂಡು ನಂತರದಲ್ಲಿ ವಲಯನಿಯಮಾವಳಿಯಂತೆ ಅವಕಾಶ ಇಲ್ಲದಿದ್ದರು ಅನುಮೋದನೆ ಪಡೆಯದೆ ಹೆಚ್ಚುವರಿ ಅಂತಸ್ತುಗಳನ್ನು ಅನಧಿಕೃತವಾಗಿ ನಿರ್ಮಿಸುತ್ತಿರುವ ಬಗ್ಗೆ.

3. ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಯಾವುದೇ ಅಭಿವೃದ್ಧಿ ಕಾರ್ಯಗಳಿಗೆ ಪ್ರಾಧಿಕಾರದಿಂದ ತಾಂತ್ರಿಕ ಅನುಮೋದನೆಯನ್ನು ಪಡೆದುಕೊಳ್ಳುವುದು ಕಡ್ಡಾಯವಾಗಿದ್ದರೂ ಸಹ ನಗರಸಭೆ ವ್ಯಾಪ್ತಿಯಲ್ಲಿ ಶೀಟ್‌ಗಳನ್ನು ಉಪಯೋಗಿಸಿ ಅನೇಕ ಕಟ್ಟಡಗಳನ್ನು ನಿರ್ಮಿಸಲು ನಗರಸಭೆಯಿಂದ ಅನುಮತಿ ನೀಡುತ್ತಿರುವುದು ಸಹ ತಿಳಿದುಬಂದಿರುತ್ತದೆ.

ಈ ಮೇಲಿನ 3 ವಿಷಯಗಳನ್ನು ಸಭೆಯಲ್ಲಿ ಚರ್ಚಿಸಿ, ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ.

**ನಿರ್ಣಯ:-**ಈ ಮೇಲಿನ ವಿಷಯಗಳ ಬಗ್ಗೆ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಿ, ಯೋಜನಾ ಬದ್ಧವಾದ ರೀತಿಯಲ್ಲಿ ನಗರವು ಬೆಳವಣಿಗೆಯಾಗುವ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಅನಧಿಕೃತವಾಗಿ/ಕಾನೂನು ಬಾಹಿರವಾಗಿ ಮಡಿಕೇರಿ ನಗರ/ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ನಿರ್ಮಿಸಿರುವ/ನಿರ್ಮಿಸುತ್ತಿರುವ ಕಟ್ಟಡಗಳನ್ನು ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ನಗರಸಭಾ ಅಧಿಕಾರಿಗಳು ಸಿಬ್ಬಂದಿ ವರ್ಗದವರು ಮತ್ತು ಪೋಲೀಸ್ ಇಲಾಖೆಯ ನೆರವು ಪಡೆದುಕೊಂಡು ಜಂಟಿ ಸ್ಥಳ ಪರಿಶೀಲಿಸಿ, ಕಾನೂನು ಬಾಹಿರವಾಗಿ ನಿರ್ಮಿಸಿರುವ/ನಿರ್ಮಿಸುತ್ತಿರುವ ಕಟ್ಟಡವನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುವಂತೆ ಆಯುಕ್ತರುಗಳಿಗೆ ಸೂಚಿಸಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**10)ವಿಷಯ ಸಂಖ್ಯೆ 10. ಶ್ರೀ ಕೆ.ಪಿ.ಅರುಣ್‌ಕುಮಾರ್ ಮತ್ತು ಸಹೋದರ ಸಹೋದರಿಯರು ಬಿನ್॥ದಿ॥ಕೆ.ಡಿ.ಪುಟ್ಟಯ್ಯ, ಮಡಿಕೇರಿ ರವರು ಕೆ.ಬಾಡಗ ಗ್ರಾಮ(ಮಡಿಕೇರಿ ನಗರಸಭಾ ಬ್ಲಾಕ್ ನಂಬರ್ 14) ಸರ್ವೆ ನಂಬರ್ 103/15ರ ಒಟ್ಟು 0.59ಎಕರೆ ವಿಸ್ತೀರ್ಣದ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಕೋರಿರುತ್ತಾರೆ.**

**ಟಿಪ್ಪಣಿ:-**ಪ್ರಸ್ತಾವಿತ ಜಮೀನು ಮೇಲ್ಕಂಡ ಅರ್ಜಿದಾರರಿಗೆ ದಾನ ಪತ್ರದ ಮೂಲಕ ವಿಂಗಡನೆ ಆಗಿದ್ದು, ಸದರಿ ಜಾಗಕ್ಕೆ ಉತ್ತರದಲ್ಲಿ 4.50ಮೀ, ದಕ್ಷಿಣದಲ್ಲಿ 5.00ಮೀ ಪೂರ್ವದಲ್ಲಿ 2.40ಮೀ ಹಾಗೂ ಪಶ್ಚಿಮದಲ್ಲಿ 6.00ಮೀ ಅಗಲದ ರಸ್ತೆ ಸಂಪರ್ಕವನ್ನು ಹೊಂದಿದ್ದು, ಸದರಿ ಉತ್ತರ ಹಾಗೂ ದಕ್ಷಿಣದ ರಸ್ತೆಯನ್ನು 9.00ಮೀ ಅಗಲಕ್ಕೆ ವಿಸ್ತರಿಸಿದ್ದು, ಪೂರ್ವದ ರಸ್ತೆಯನ್ನು 6.00ಮೀ ಅಗಲಕ್ಕೆ ವಿಸ್ತರಿಸಿ ನಕ್ಷೆ ಸಲ್ಲಿಸಿರುತ್ತಾರೆ. ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ ಪರಿಷ್ಕೃತ-1 (ಅಂತಿಮ)2021ರನ್ವಯ ವಸತಿ ವಲಯದಲ್ಲಿದ್ದು, ಆರ್.ಟಿ.ಸಿ.ಯಲ್ಲಿ ಮನೆದಳವೆಂದು ನಮೂದು ಇರುತ್ತದೆ. ಅರ್ಜಿದಾರರು ಸಲ್ಲಿಸಿರುವ ವಿನ್ಯಾಸ ನಕ್ಷೆಯಂತೆ ವಸತಿ ಉದ್ದೇಶಕ್ಕೆ ಶೇ.54.99 ಉದ್ಯಾನವನ ಮತ್ತು ಬಯಲುಜಾಗಕ್ಕೆ ಶೇ.32.33 ಹಾಗೂ ರಸ್ತೆಗಾಗಿ ಶೇ.12.68 ಜಾಗವನ್ನು ಕಾಯ್ದಿರಿಸಿದ್ದು, ಜಮೀನಿನ ವಿಸ್ತೀರ್ಣ ಚಿಕ್ಕದಾಗಿರುವ ಕಾರಣ ನಾಗರೀಕ ಸೌಲಭ್ಯದ ಬದಲಾಗಿ ಉದ್ಯಾನವನಕ್ಕೆ ಜಾಗವನ್ನು ಕಾಯ್ದಿರಿಸಲಾಗಿರುತ್ತದೆ. ಅರ್ಜಿದಾರರಿಂದ ಒಟ್ಟು ಶುಲ್ಕ ರೂ.62,877/-ಮಾತ್ರವನ್ನು ಪ್ರಾಧಿಕಾರಕ್ಕೆ ಪಾವತಿಸಿಕೊಂಡು ವಿನ್ಯಾಸ ನಕ್ಷೆಯನ್ನು ಅನುಮೋದಿಸಬಹುದಾಗಿರುತ್ತದೆ ಎಂದು ನಗರ ಯೋಜನಾ ಸದಸ್ಯರು ಅಭಿಪ್ರಾಯ ನೀಡಿರುವರು. ಸಭಾ ನಿರ್ಣಯಕ್ಕಾಗಿ ಮಂಡಿಸಿದೆ.

**ನಿರ್ಣಯ:-** ಸದರಿ ಪ್ರಸ್ತಾವನೆಯನ್ನು ಪರಿಗಣಿಸಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**11)ವಿಷಯ ಸಂಖ್ಯೆ 11:- ಶ್ರೀ ಕೆ.ಎಂ.ಲಕ್ಷ್ಮೀನಾರಾಯಣ ಮತ್ತು ಶ್ರೀಮತಿ ಜಿ.ಎಲ್.ಶಾಂತಿರವರಿಂದ ಅಧಿಕಾರ ಪತ್ರ ಪಡೆದ ಶ್ರೀ ಕೇಶವ ಪ್ರಸಾದ್ ಮುಳಿಯ, ಮಡಿಕೇರಿರವರು ಕೆ.ಬಾಡಗ ಗ್ರಾಮ ಸರ್ವೆ ನಂಬರ್ 102 ರಲ್ಲಿ 0.39ಎಕರೆ 104/1 ರಲ್ಲಿ 2.76ಎಕರೆ ಒಟ್ಟು 3.15ಎಕರೆ ವಿಸ್ತೀರ್ಣದ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಕೋರಿರುತ್ತಾರೆ ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.**

**ಟಿಪ್ಪಣಿ:-** ಪ್ರಸ್ತಾವಿತ ಜಮೀನು ಮಡಿಕೇರಿ ನಗರದ ಮಹಾಯೋಜನೆ ಪರಿಷ್ಕೃತ-1 (ಅಂತಿಮ) 2021ರನ್ವಯ ವಸತಿ ವಲಯದಲ್ಲಿ ಬರುತ್ತಿದ್ದು, ಜಮೀನಿನ ಪೂರ್ವದಲ್ಲಿ 4.00ಮೀ ಅಗಲದ ಸಾರ್ವಜನಿಕ ರಸ್ತೆಯಿಂದ ಸಂಪರ್ಕವನ್ನು ಹೊಂದಿರುತ್ತದೆ. ಸದರಿ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಯವರ ಪತ್ರ ಸಂಖ್ಯೆ:ಭೂಪರಿ/137/2009-10, ದಿನಾಂಕ:21.06.2010ರಂದು ಮಾನ್ಯ ಜಿಲ್ಲಾಧಿಕಾರಿಯವರು ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿ ಆದೇಶವನ್ನು ಹೊರಡಿಸಿರುತ್ತಾರೆ. ಅರ್ಜಿದಾರರು ಪ್ರಸ್ತಾವಿತ ಜಮೀನನ್ನು ವಸತಿ ಉದ್ದೇಶಕ್ಕೆ ವಿನ್ಯಾಸ ಅನುಮೋದನೆ ಕೋರಿದ್ದು, ಭೂ ಪರಿವರ್ತನಾ ಆದೇಶದಲ್ಲಿ ವಾಣಿಜ್ಯ ಉದ್ದೇಶಕ್ಕೆ ಬಳಸತಕ್ಕದೆಂದು ಹಾಗೂ ಸದರಿ ಭೂ ಪರಿವರ್ತನೆಯಾದ ಎರಡು ವರ್ಷದೊಳಗೆ ಸದರಿ ಜಮೀನಿನಲ್ಲಿ ಕಟ್ಟಡವನ್ನು ನಿರ್ಮಿಸುವುದು ತಪ್ಪಿದಲ್ಲಿ ಭೂ ಪರಿವರ್ತನಾ ಆದೇಶವು ತನ್ನಿಂದ ತಾನೇ ರದ್ದಾಗುತ್ತದೆ ಎಂದು ಷರತ್ತುಗಳನ್ನು ವಿಧಿಸಿ ಭೂ ಪರಿವರ್ತನೆ ಆದೇಶವನ್ನು ನೀಡಿರುತ್ತರೆ.

ಪ್ರಸ್ತಾವಿತ ಜಮೀನಿನ ಭೂ ಪರಿವರ್ತನೆ ಉದ್ದೇಶವನ್ನು ವಸತಿ ಉಪಯೋಗಕ್ಕೆ ಬದಲಾವಣೆ ಮಾಡಿ ಮತ್ತು ಭೂ ಪರಿವರ್ತನಾ ಆದೇಶವನ್ನು ಮಾನ್ಯ ಕಂದಾಯ ಇಲಾಖೆಯಿಂದ ನವೀಕರಿಸಿಕೊಂಡು ಬಂದ ನಂತರದಲ್ಲಿ ವಿನ್ಯಾಸ ಅನುಮೋದನೆಯ ಬಗ್ಗೆ ಪರಿಶೀಲಿಸಬಹುದಾಗಿರುತ್ತದೆ ಎಂದು ನಗರ ಯೋಜನಾ ಸದಸ್ಯರ ಅಭಿಪ್ರಾಯವಿರುತ್ತದೆ.

ಪ್ರಸ್ತಾವನೆಯನ್ನು ಸಭಾ ಅನುಮೋದನೆಯಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಪ್ರಸ್ತಾವಿತ ಜಮೀನು ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡುವ ಸಮಯದಲ್ಲಿ ಕೆಲವು ನಿಬಂಧನೆಗಳಿಗೆ ಒಳಪಟ್ಟು ಭೂ ಪರಿವರ್ತನೆ ಮಾಡಿದ್ದು, ಅದರಂತೆ ಪರಿವರ್ತನೆಯಾದ ದಿನಾಂಕದಿಂದ ಎರಡು ವರ್ಷಗಳ ಒಳಗಡೆ ಪರಿವರ್ತನೆಯಾದ ಸ್ಥಳವನ್ನು ಅಭಿವೃದ್ಧಿ ಪಡಿಸಬೇಕಿದೆ. ಆದರೆ ನಿಗಧಿತ ಅವಧಿಯಲ್ಲಿ ಅಭಿವೃದ್ಧಿ ಪಡಿಸದ ಕಾರಣ ಮಾನ್ಯ ಜಿಲ್ಲಾಧಿಕಾರಿಗಳ ಕಚೇರಿಯಿಂದ ಭೂ ಪರಿವರ್ತನೆ ಆದೇಶವನ್ನು ಮಾರ್ಪಾಡು ಮಾಡಿ ಸಲ್ಲಿಸಿದಲ್ಲಿ ಮುಂದಿನ ಸಭೆಯ ಗಮನಕ್ಕೆ ತಂದು ಅದರಂತೆ ಕ್ರಮ ಕೈಗೊಳ್ಳಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**12)ವಿಷಯಸಂಖ್ಯೆ 12:–ಶ್ರೀಮತಿ ಕೆ.ಎಸ್.ದೇಚಮ್ಮ, ಮೇಕೇರಿ ಗ್ರಾಮ, ಮಡಿಕೇರಿರವರು ಮಡಿಕೇರಿ ಸಂಪಾಜೆ ಹೋಬಳಿ, ಮೇಕೇರಿ ಗ್ರಾಮದ ಸರ್ವೆ ನಂಬರ್ 47/7ರಲ್ಲಿನ 0.26ಎಕರೆ ವಿಸ್ತೀರ್ಣದ ಜಮೀನನ್ನು ವಸತಿ ಉಪಯೋಗಕ್ಕೆ ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರ ಕೋರಿರುವ ಬಗ್ಗೆ.**

**ಟಿಪ್ಪಣಿ:–** ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ ಪರಿಷ್ಕೃತ–1 (ಅಂತಿಮ)2021ರನ್ವಯ ವಸತಿ ವಲಯದಲ್ಲಿ ಬರುತ್ತಿದ್ದು, 4.6ಮೀ ಅಗಲದ ಗ್ರಾಮ ಪಂಚಾಯಿತಿ ರಸ್ತೆಯಿಂದ ಸಂಪರ್ಕವನ್ನು ಹೊಂದಿರುತ್ತದೆ. ಹಾಲಿ ಈ ರಸ್ತೆಯನ್ನು 9.00ಮೀ ಅಗಲಕ್ಕೆ ವಿಸ್ತರಿಸುವ ಅವಶ್ಯಕತೆ ಇರುತ್ತದೆ. ಈ ಜಾಗದಲ್ಲಿ ಅಂದಾಜು 114.0ಚ.ಮೀ ವಿಸ್ತೀರ್ಣದ ನೆಲ+1ನೇ ಅಂತಸ್ತಿನ ವಸತಿ ಕಟ್ಟಡ ಇರುತ್ತದೆ ಹಾಗೂ ಸದರಿ ಜಾಗದ ಸುತ್ತಮುತ್ತ ವಸತಿ ಬೆಳವಣಿಗೆಗಳು ಬಂದಿದ್ದು, ವಸತಿ ಉದ್ದೇಶಕ್ಕೆ ಯೋಗ್ಯವಾಗಿರುವುದರಿಂದ ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರವನ್ನು ನೀಡಬಹುದೆಂದು ನಗರ ಯೋಜನಾ ಸದಸ್ಯರು ಅಭಿಪ್ರಾಯ ನೀಡಿರುತ್ತಾರೆ. ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಭೂ ಪರಿವರ್ತನೆ ಮಾಡಲು ಪ್ರಾಧಿಕಾರದಿಂದ ನಿರಾಕ್ಷೇಪಣಾ ಪತ್ರ ನೀಡಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**13)ವಿಷಯಸಂಖ್ಯೆ 13:– ಶ್ರೀ ಪೂರ್ಣಚಂದ್ರರಾವ್ ಮತ್ತು ಶ್ರೀ ಎನ್.ಕೃಷ್ಣಾರೆಡ್ಡಿ, ಕರ್ಣಂಗೇರಿ ಗ್ರಾಮ, ಮಡಿಕೇರಿರವರು ಮಡಿಕೇರಿ ತಾಲ್ಲೂಕು, ಕರ್ಣಂಗೇರಿ ಗ್ರಾಮದ ಸರ್ವೆ ನಂಬರ್ 201/3ರಲ್ಲಿನ 8.70ಎಕರೆ ವಿಸ್ತೀರ್ಣದ ಪೈಕಿ 6.00ಎಕರೆ ವಿಸ್ತೀರ್ಣದ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರವನ್ನು ನೀಡಲು ಕೋರಿರುತ್ತಾರೆ.**

**ಟಿಪ್ಪಣಿ:–** ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ ಪರಿಷ್ಕೃತ–1 (ಅಂತಿಮ)2021ರನ್ವಯ ವಾಣಿಜ್ಯ ಉದ್ದೇಶಕ್ಕೆಂದು ನಿಗಧಿಯಾಗಿದೆ. ಈ ಜಮೀನು ಮಡಿಕೇರಿ–ಸೋಮವಾರಪೇಟೆ ರಾಜ್ಯ ಹೆದ್ದಾರಿಯಿಂದ ಪೂರ್ವಕ್ಕೆ ಹಾಲಿ ಇರುವ 12.00ಮೀ ಅಗಲದ ಸಾರ್ವಜನಿಕ ರಸ್ತೆಯಿಂದ (ಡಾಮರು ರಸ್ತೆ) ಸಂಪರ್ಕವಿರುವುದು ಕಂಡುಬಂದಿದೆ. ಈ ಜಾಗದ ಸುತ್ತಮುತ್ತಲು ಹಾಲಿ ಹಲವಾರು ವಸತಿ ಬೆಳವಣಿಗೆಗಳು ಇದ್ದು, ಗ್ರಾಮದ ಅಭಿವೃದ್ಧಿ ಹೊಂದುತ್ತಿರುವ ಪ್ರದೇಶಕ್ಕೆ ಹೊಂದಿಕೊಂಡಿದೆ ಮತ್ತು ಈ ಸ್ಥಳದಲ್ಲಿ ಯಾವುದೇ ವಿಧವಾದ ಅಧಿಕ ವಿದ್ಯುತ್ ತಂತಿಗಳು ಹಾದು ಹೋಗಿರುವುದಿಲ್ಲ ಹಾಗೂ ಸ್ಥಳವು ಜೌಗು ಪ್ರದೇಶವಾಗಿರುವುದಿಲ್ಲ. ಆದ್ದರಿಂದ ಪ್ರಸ್ತಾವಿತ ಸ್ಥಳವು ವಾಣಿಜ್ಯ ಉದ್ದೇಶದ ರೆಸಾರ್ಟ್ ನಿರ್ಮಿಸಲು ಯೋಗ್ಯವಾಗಿದೆ ಎಂದು ನಗರಯೋಜನಾ ಸದಸ್ಯರು ಅಭಿಪ್ರಾಯ ನೀಡಿರುತ್ತಾರೆ.

ಆದರೆ ಸದರಿ ಜಾಗವನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತಿಸಲು ಈ ಕಚೇರಿಯಿಂದ ನಿರಾಕ್ಷೇಪಣಾ ಪತ್ರ ನೀಡುವ ಬಗ್ಗೆ ಶ್ರೀ ಕೆ.ಎಸ್.ದೇವಯ್ಯರವರು ಆಕ್ಷೇಪಣಾ ಪತ್ರಗಳನ್ನು ಸಲ್ಲಿಸಿ, ನನ್ನ ಮತ್ತು ಶ್ರೀ ಪೂರ್ಣಚಂದ್ರರಾವ್‌ರವರ ಕ್ರಯ ಪತ್ರದಲ್ಲಿ 201/3ರ ಜಮೀನಿನಲ್ಲಿ 23ಅಡಿಗಳ ಅಗಲದ ರಸ್ತೆಯನ್ನು ನನ್ನ ಅನುಭವದಲ್ಲಿರುವ 201/1 ಮತ್ತು 201/2ರ ಜಮೀನುಗಳಿಗೆ ಹೋಗಲು ಬಿಡಬೇಕೆಂದು ಒಡಂಬಡಿಕೆಯಾಗಿರುತ್ತದೆ. ಅದರಂತೆ ಸ್ಥಳದಲ್ಲಿ ಜಾಗವನ್ನು ಬಿಟ್ಟಿರುವುದಿಲ್ಲವೆಂದು ತಕರಾರು ಅರ್ಜಿ

ಸಲ್ಲಿಸಿರುತ್ತಾರೆ ಆದ್ದರಿಂದ ಈ ಬಗ್ಗೆ ಪ್ರಾಧಿಕಾರದ ವಕೀಲರಿಂದ ಕಾನೂನು ಸಲಹೆಯನ್ನು ಕೋರಲಾಗಿ, ಶ್ರೀ ಕೆ.ಎಸ್.ದೇವಯ್ಯರವರು ಸಲ್ಲಿಸಿರುವ ಅರ್ಜಿಯನ್ನು ಪರಿಗಣಿಸಲು ಕಾನೂನಿನ್ವಯ ಯಾವುದೇ ಬಲವಾದ ಕಾರಣವಿಲ್ಲವೆಂದು ಅಭಿಪ್ರಾಯ ನೀಡಿ ಪೂರ್ಣ ಕಡತವನ್ನು ಮರು ಸಲ್ಲಿಸಿರುತ್ತಾರೆ ಎಂದು ಆಯುಕ್ತರು ಸಭೆಯಲ್ಲಿ ತಿಳಿಸಿದರು.

**ನಿರ್ಣಯ:–** ಪ್ರಸ್ತಾವಿತ ಜಮೀನಿಗೆ 12.00ಮೀ ಅಗಲದ ಸಾರ್ವಜನಿಕ ರಸ್ತೆಯಿಂದ ಸಂಪರ್ಕವಿರುತ್ತದೆ. ಆದರೆ ಸದರಿ ಜಮೀನಿನ ದಕ್ಷಿಣದಲ್ಲಿ ಹಾಲಿ 6.00ಮೀ ಅಗಲದ ರಸ್ತೆಯಿದ್ದು, ಇದನ್ನು ಪರಿಗಣಿಸಿ ಶ್ರೀ ಕೆ.ಎಸ್.ದೇವಯ್ಯನವರಿಗೆ ಸರ್ವೆ ನಂಬರ್ 201/2 ರಲ್ಲಿನ 2.44ಎಕರೆ ವಿಸ್ತೀರ್ಣದ ಜಾಗವನ್ನು ವಾಣಿಜ್ಯ ಉದ್ದೇಶಕ್ಕೆ ಸರ್ವೀಸ್ ಅಪಾರ್ಟ್‌ಮೆಂಟ್ ನಿರ್ಮಿಸಲು ಪ್ರಾಧಿಕಾರದ ಸಭಾ ಅನುಮೋದನೆಯೊಂದಿಗೆ ಈ ಕಚೇರಿಯಿಂದ ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರವನ್ನು ಈಗಾಗಲೇ ನೀಡಲಾಗಿರುತ್ತದೆ ಎಂದು ಸಭೆಯಲ್ಲಿ ಆಯುಕ್ತರು ಮಾಹಿತಿಯನ್ನು ನೀಡಿದರು.

ಆದರೆ ಹಾಲಿ ಇರುವ 6.00ಮೀ ಅಗಲದ ರಸ್ತೆಯನ್ನು ಒಡಂಬಡಿಕೆ (ಕರಾರು ಪತ್ರದಲ್ಲಿ) ನಮೂದಿಸಿರುವಂತೆ ಶ್ರೀ ಪೂರ್ಣಚಂದ್ರರಾವ್ ರವರು 23.00 ಅಡಿ ಅಗಲಕ್ಕೆ ವಿಸ್ತರಿಸತಕ್ಕದೆಂದು ಶ್ರೀ ಕೆ.ಎಸ್.ದೇವಯ್ಯನವರು ಆಕ್ಷೇಪಣಾ ಪತ್ರ ಸಲ್ಲಿಸಿರುವುದಕ್ಕೆ ಪ್ರತಿಯಾಗಿ ದಿನಾಂಕ: 08.03.2016 ರಂದು ಶ್ರೀ ಪೂರ್ಣಚಂದ್ರರಾವ್ ರವರು ನಮ್ಮಗಳ ಒಡಂಬಡಿಕೆಯಂತೆ 23.00 ಅಡಿಗಳ ರಸ್ತೆಯನ್ನು ನಿರ್ಮಿಸಿಕೊಡುವುದಾಗಿ ಪತ್ರವನ್ನು ಈ ಕಚೇರಿಗೆ ಸಲ್ಲಿಸಿರುತ್ತಾರೆ. ಈ ಬಗ್ಗೆ ಸಭೆಯಲ್ಲಿ ಚರ್ಚಿಸಿ ಪ್ರಾಧಿಕಾರದ ವಕೀಲರು ನೀಡಿರುವ ಕಾನೂನು ಸಲಹೆಯನ್ನು ಪರಿಗಣಿಸಿ, ಹಾಗೂ ಪ್ರಸ್ತಾವಿತ ಸ್ಥಳವನ್ನು ಜನಪ್ರತಿನಿಧಿಗಳವರೊಂದಿಗೆ ಪ್ರಾಧಿಕಾರದ ಅಧ್ಯಕ್ಷರು, ಆಯುಕ್ತರು ನಗರಸಭಾ ಆಯುಕ್ತರು ರವರುಗಳು ಸಭಾ ನಂತರದಲ್ಲಿ ಸ್ಥಳ ಪರಿಶೀಲಿಸಿ, ನೊಂದಾಯಿತ ಕರಾರು ಪತ್ರದಲ್ಲಿ ನಮೂದಿಸಿರುವಂತೆ ಶ್ರೀ ಪೂರ್ಣಚಂದ್ರರಾವ್ ರವರು ಭೌತಿಕವಾಗಿ 23.00ಅಡಿ ಅಗಲದ ರಸ್ತೆಯನ್ನು ನಿರ್ಮಿಸಿದ ನಂತರ ಪ್ರಾಧಿಕಾರದಿಂದ ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತಿಸಲು ನಿರಾಕ್ಷೇಪಣಾ ಪತ್ರ ನೀಡುವಂತೆ ತೀರ್ಮಾನಿಸಲಾಯಿತು.

**14)ವಿಷಯಸಂಖ್ಯೆ 14:– 1. ಶ್ರೀ ಕೆ.ಎ.ಮೂಸ ಮತ್ತು ಇತರರು, 2. ಶ್ರೀ ಕೆ.ಎಂ.ಮೊಣ್ಣಪ್ಪ ಮತ್ತು ಇತರರುರವರುಗಳ ಕಡತಕ್ಕೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರಿನಲ್ಲಿ ಪ್ರಾಧಿಕಾರದ ಪರವಾಗಿ ನ್ಯಾಯಾಲಯದಲ್ಲಿ ವಕಾಲತ್ತು ವಹಿಸಿರುವ ಶ್ರೀ ಆರ್.ನಾಗೇಂದ್ರನಾಯಕ್, ವಕೀಲರು, ಮಾನ್ಯ ಉಚ್ಚ ನ್ಯಾಯಾಲಯರವರು ತಲಾ 16,000/–ದಂತೆ 2 ನ್ಯಾಯಾಲಯದ ಪ್ರಕರಣಗಳಿಗೆ ಸಂಬಂಧಿಸಿದಂತೆ ಒಟ್ಟು ರೂ. 32,000/– ಮಾತ್ರವನ್ನು ಪಾವತಿಸಲು ಕೋರಿ ಬಿಲ್ ಸಲ್ಲಿಸಿರುತ್ತಾರೆ. ಸಭಾ ಅನುಮೋದನೆಗಾಗಿ ಮಂಡಿಸಿದೆ.**

**ಟಿಪ್ಪಣಿ:–** 1. ಶ್ರೀ ಮೂಸಾ ಮತ್ತು ಇತರರು ವಿರುದ್ಧ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಮಡಿಕೇರಿ. ರಿಟ್ ಪಿಟೀಷನ್ ಸಂಖ್ಯೆ: 9822–9826/2015 ಎಲ್.ಬಿ.–ಆರ್.ಇ.ಎಸ್

2. ಶ್ರೀ ಕೆ.ಎಂ.ಮೊಣ್ಣಪ್ಪ ಮತ್ತು ಇತರರು ವಿರುದ್ಧ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಮಡಿಕೇರಿ ರಿಟ್ ಪಿಟೀಷನ್ ಸಂಖ್ಯೆ: 16617–16624/2015 ಎಲ್.ಬಿ.–ಆರ್.ಇ.ಎಸ್

ಇವರುಗಳು ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರಿನಲ್ಲಿ ಮಹದೇವಪೇಟೆ ರಸ್ತೆ ವಿಸ್ತರಣೆಗೆ ಸಂಬಂಧಿಸಿದಂತೆ ಆಯುಕ್ತರ ವಿರುದ್ದ ದಾವೆ ಹೂಡಿದ್ದು, ಈ ಬಗ್ಗೆ ಶ್ರೀ ಆರ್.ನಾಗೇಂದ್ರನಾಯಕ್, ವಕೀಲರು, ಮಾನ್ಯ ಉಚ್ಚ ನ್ಯಾಯಾಲಯರವರು ಆಯುಕ್ತರ ಪರವಗಿ ನ್ಯಾಯಾಲಯಕ್ಕೆ ಹಾಜರಾಗಿ ವಕಾಲತ್ತು ವಹಿಸಿರುವ ಬಾಬ್ತು ತಲಾ ರೂ.16,000/– ದಂತೆ 2 ಪ್ರಕರಣಗಳಿಗೆ ಸಂಬಂಧಿಸಿದಂತೆ ಒಟ್ಟು ರೂ.32,000/– ಮಾತ್ರವನ್ನು ಪಾವತಿಸಲು ಕೊರಿ ಬಿಲ್ ಸಲ್ಲಿಸಿರುತ್ತಾರೆ. ಸಭಾ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:–** ಪ್ರಾಧಿಕಾರದ ವಕೀಲರುಗಳಿಗೆ ಪ್ರಾಧಿಕಾರದ ನಿಧಿಯಿಂದ ಶುಲ್ಕ ಪಾವತಿಸಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**15)ವಿಷಯ ಸಂಖ್ಯೆ 15:– ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಕಾಟಕೇರಿ ಗ್ರಾಮದ ಸರ್ವೆ ನಂಬರ್ 238/29ರಲ್ಲಿ 0.20ಎಕರೆ ಮತ್ತು 238/13ರಲ್ಲಿ 0.10ಎಕರೆ ವಿಸ್ತೀರ್ಣದ ಜಾಗವನ್ನು ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಲು ಈ ಕಚೇರಿಯ ನಿರಾಕ್ಷೇಪಣಾ ಪತ್ರವನ್ನು ಕೋರಿ ಶ್ರೀ ಬಿ.ಆರ್.ಸದಾಶಿವ ರೈ ರವರು ಅರ್ಜಿ ಸಲ್ಲಿಸಿರುತ್ತಾರೆ.**

**ಟಿಪ್ಪಣಿ:–** ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ ಪರಿಷ್ಕೃತ–1 (ಅಂತಿಮ)2021ರನ್ವಯ ವಸತಿ ವಲಯದಲ್ಲಿ ಬರುತ್ತಿದ್ದು, 6.00ಮೀ ಅಗಲದ ಮಣ್ಣಿನ ಸಾರ್ವಜನಿಕ ರಸ್ತೆಯಿಂದ ಸಂಪರ್ಕವನ್ನು ಹೊಂದಿರುತ್ತದೆ ಎಂದು ಮದೆ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿರವರು ದೃಡೀಕರಣ ಪತ್ರ ನೀಡಿರುತ್ತಾರೆ. ಸದರಿ ಜಮೀನಿನಲ್ಲಿ ಈಗಾಗಲೇ ಸುಮಾರು 122.40ಚ.ಮೀ ವಿಸ್ತೀರ್ಣದ ನೆಲ+ಒಂದನೇ ಅಂತಸ್ತಿನ ಕಟ್ಟಡ ಹಾಗೂ 55.5ಚ.ಮೀ ವಿಸ್ತೀರ್ಣದ ಹಳೆಯ ಕಟ್ಟಡ ಇರುವುದು ಕಂಡುಬರುತ್ತಿದೆ. ಪ್ರಸ್ತಾವಿತ ಜಾಗದ ಸುತ್ತಮುತ್ತಲು ವಸತಿ ಬೆಳವಣಿಗೆಗಳು ಬಂದಿದ್ದು, ವಸತಿ ಉದ್ದೇಶಕ್ಕೆ ಸೂಕ್ತವಾಗಿರುತ್ತದೆ ಎಂದು ನಗರಯೋಜನಾ ಸದಸ್ಯರು ಅಭಿಪ್ರಾಯಿಸಿ ಕಡತವನ್ನು ಸಭಾ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:–** ಈ ಬಗ್ಗೆ ಸಭೆಯಲ್ಲಿ ಚರ್ಚಿಸಿ, ಸದರಿ ಜಾಗವು ರಾಷ್ಟ್ರ/ಕರ್ನಾಟಕ ರಾಜ್ಯ ಹೆದ್ದಾರಿ ವ್ಯಾಪ್ತಿಯ ಹತ್ತಿರದಲ್ಲಿ ಬರುತ್ತಿರುವುದರಿಂದ ಹಾಗೂ ನಿವೇಶನದಲ್ಲಿ ಈಗಾಗಲೇ ಕಟ್ಟಡ ನಿರ್ಮಿಸಿರುವುದನ್ನು ಪರಿಗಣಿಸಿ ಜನಪ್ರತಿನಿಧಿಗಳವರು, ಪ್ರಾಧಿಕಾರದ ಅಧ್ಯಕ್ಷರು, ಆಯುಕ್ತರು, ನಗರಸಭಾ ಆಯುಕ್ತರು ರವರುಗಳು ಸಭಾ ನಂತರದಲ್ಲಿ ಜಂಟಿಯಾಗಿ ಸ್ಥಳ ಪರಿಶೀಲಿಸಿ, ಪ್ರಸ್ತಾವನೆಯನ್ನು ಅವಕಾಶವಿದ್ದಲ್ಲಿ ಪರಿಗಣಿಸಬಹುದೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

**16) ವಿಷಯಸಂಖ್ಯೆ 16:– ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಕಾಟಕೇರಿ ಗ್ರಾಮದ ಸರ್ವೆ ನಂಬರ್ 238/30 ರಲ್ಲಿ 0.13ಎಕರೆ ವಿಸ್ತೀರ್ಣದ ಜಾಗವನ್ನು ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಲು ಈ ಕಚೇರಿಯ ನಿರಾಕ್ಷೇಪಣಾ ಪತ್ರವನ್ನು ಕೋರಿ ಶ್ರೀಮತಿ ಡಿ.ಕೆ.ಕುಸುಮ ರವರು ಅರ್ಜಿ ಸಲ್ಲಿಸಿರುತ್ತಾರೆ.**

**ಟಿಪ್ಪಣಿ:–** ಪ್ರಸ್ತಾವಿತ ಜಾಗವು ಮಡಿಕೇರಿ ನಗರದ ಅನುಮೋದಿತ ಮಹಾಯೋಜನೆ ಪರಿಷ್ಕೃತ–1 (ಅಂತಿಮ)2021ರನ್ವಯ ವಸತಿ ವಲಯದಲ್ಲಿ ಬರುತ್ತಿದ್ದು, 6.00ಮೀ ಅಗಲದ ಮಣ್ಣಿನ ಸಾರ್ವಜನಿಕ ರಸ್ತೆಯಿಂದ ಸಂಪರ್ಕವನ್ನು ಹೊಂದಿರುತ್ತದೆ ಎಂದು ಮದೆ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿರವರು ದೃಡೀಕರಣ ಪತ್ರ ನೀಡಿರುತ್ತಾರೆ. ಸದರಿ ಜಮೀನು ಖಾಲಿ ಇರುತ್ತದೆ. ಪ್ರಸ್ತಾವಿತ ಜಾಗದ ಸುತ್ತಮುತ್ತಲು ವಸತಿ ಬೆಳವಣಿಗೆಗಳು ಬಂದಿದ್ದು, ವಸತಿ ಉದ್ದೇಶಕ್ಕೆ ಸೂಕ್ತವಾಗಿರುತ್ತದೆ ಎಂದು ನಗರಯೋಜನಾ ಸದಸ್ಯರು ಅಭಿಪ್ರಾಯಿಸಿ ಕಡತವನ್ನು ಸಭಾ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:–** ಈ ಬಗ್ಗೆ ಸಭೆಯಲ್ಲಿ ಚರ್ಚಿಸಿ, ಸದರಿ ಜಾಗವು ರಾಷ್ಟ್ರ/ಕರ್ನಾಟಕ ರಾಜ್ಯ ಹೆದ್ದಾರಿ ವ್ಯಾಪ್ತಿಯ ಹತ್ತಿರದಲ್ಲಿ ಬರುತ್ತಿರುವುದರಿಂದ ಜನಪ್ರತಿನಿಧಿಗಳವರು, ಪ್ರಾಧಿಕಾರದ ಅಧ್ಯಕ್ಷರು, ಆಯುಕ್ತರು, ನಗರಸಭಾ ಆಯುಕ್ತರು ರವರುಗಳು ಸಭಾ ನಂತರದಲ್ಲಿ ಜಂಟಿಯಾಗಿ ಸ್ಥಳ ಪರಿಶೀಲಿಸಿ, ಪ್ರಸ್ತಾವನೆಯನ್ನು ಅವಕಾಶವಿದ್ದಲ್ಲಿ ಪರಿಗಣಿಸಬಹುದೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

**17)ವಿಷಯಸಂಖ್ಯೆ 17: ಶ್ರೀ ಶಿವಮಲ್ಲು, ಹಿಂದಿನ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಮಡಿಕೇರಿ ಇವರು ಈ ಪ್ರಾಧಿಕಾರದಲ್ಲಿ ಆಯುಕ್ತರಾಗಿ ಕರ್ತವ್ಯ ನಿರ್ವಹಿಸಿರುವ ಅವಧಿ ದಿನಾಂಕ:02.11.200ರಿಂದ 31.12.2003ರ ಅವಧಿಯವರೆಗೆ ಪಾವತಿಸಬೇಕಾದ ವೇತನ ವ್ಯತ್ಯಾಸ ಒಟ್ಟು ರೂ. 3,15,829/– ಮಾತ್ರವನ್ನು ಪಾವತಿಸಲು ಕೋರಿ ಶ್ರೀಮತಿ ಎಸ್.ಸುಲೋಚನಾ, ಸದರಿ ಅಧಿಕಾರಿಯವರ ಪತ್ನಿ ಅರ್ಜಿ ಸಲ್ಲಿಸಿರುತ್ತಾರೆ.**

**ಟಿಪ್ಪಣಿ:–** ಶ್ರೀ ಶಿವಮಲ್ಲು, ಹಿಂದಿನ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಮಡಿಕೇರಿರವರು ಈ ಪ್ರಾಧಿಕಾರದ ಆಯುಕ್ತರಾಗಿ 02.11.200ರಂದು ಅಧಿಕಾರ ವಹಿಸಿಕೊಂಡು ದಿನಾಂಕ:31.12.2003ರ ತನಕ ಕಾರ್ಯ ನಿರ್ವಹಿಸಿ, ಈ ಪ್ರಾಧಿಕಾರದಿಂದಲೆ ಸೇವೆಯಿಂದ ವಯೋ ನಿವೃತ್ತಿ ಆಗಿರುತ್ತಾರೆ. ಸದರಿಯವರು ಅವರ ಸೇವಾ ಅವಧಿಯಲ್ಲಿ ವೇತನ, ತುಟ್ಟಿಭತ್ಯೆ, ಮನೆ ಬಾಡಿಗೆ ಭತ್ಯೆ ಹಾಗೂ ಗಿರಿಭತ್ಯೆ ಹೀಗೆ ಒಟ್ಟು ವೇತನ ರೂ.8,557/–ಮಾತ್ರದಂತೆ ಸೇವೆಗೆ ಸೇರಿದ ದಿನಾಂಕದಿಂದ ಅವರು ವಯೋನಿವೃತ್ತಿಯಾದ ದಿನಾಂಕ:31.12.2003ರವರೆಗೆ ಪಡೆದುಕೊಂಡಿರುತ್ತಾರೆ. ಹಾಲಿ ಅವರ ವೇತನವನ್ನು ಪರಿಷ್ಕರಿಸಿ,

ಪಾವತಿಸುವಂತೆ ಪ್ರಿನ್ಸಿಪಾಲ್ ಎಕೌಂಟೆಂಟ್ ಜನರಲ್ ಕರ್ನಾಟಕ, ಬೆಂಗಳೂರುರವರ ಪತ್ರ ಸಂಖ್ಯೆ: GE Cell II/D/SW-96/151/2015-16/439-441 ದಿನಾಂಕ:17.07.2015ರಲ್ಲಿ ಇಂಟಿಮೇಷನ್ ಪತ್ರವನ್ನು ನೀಡಿರುತ್ತಾರೆ. ಆದರೆ ಸದರಿ ಅಧಿಕಾರಿಯವರು ದಿನಾಂಕ:21.07.2015ರಂದು ಮರಣ ಹೊಂದಿರುತ್ತಾರೆ. ಆದ ಕಾರಣ ಅವರ ಪತ್ನಿಯಾದ ಶ್ರೀಮತಿ ಸುಲೋಚನ ಎಸ್. ರವರು ಸದರಿ ಅಧಿಕಾರಿಯವರ ಒಟ್ಟು ವೇತನ ರೂ. 3,15,829/–ಮಾತ್ರವನ್ನು ಪಾವತಿಸಲು ಸಂಬಂಧಿಸಿದ ದಾಖಲಾತಿಗಳನ್ನು ಲಗತ್ತಿಸಿ, ಮನವಿ ಪತ್ರವನ್ನು ಸಲ್ಲಿಸಿರುತ್ತಾರೆ.

ರೂ. 3,15,829/–ಮಾತ್ರವನ್ನು ಸದರಿ ದಿವಂಗತ ಶ್ರೀ ಶಿವಮಲ್ಲುರವರ ಪತ್ನಿಯವರಾದ ಎಸ್.ಸುಲೋಚನಾರವರಿಗೆ ಪಾವತಿಸಲು ಸಭಾ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಮಂಡಿಸಲಾಗಿದೆ.

**ನಿರ್ಣಯ:–** ಶ್ರೀ ಶಿವಮಲ್ಲು, ಹಿಂದಿನ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಮಡಿಕೇರಿರವರು ಈಗಾಗಲೇ ಮರಣ ಹೊಂದಿದ್ದು, ಅವರ ಪತ್ನಿಯಾದ ಶ್ರೀಮತಿ ಎಸ್.ಸುಲೋಚನ ರವರು ಮರಣ ದೃಢೀಕರಣ ಪತ್ರವನ್ನು ಸಲ್ಲಿಸಿ, ಸದರಿ ಅಧಿಕಾರಿಯವರಿಗೆ ಅವರ ಅಧಿಕಾರವಧಿಯಲ್ಲಿ ಪಾವತಿಸಲು ಬಾಕಿ ಇರುವ ರೂ.3,15,829/– (ರೂ. ಮೂರು ಲಕ್ಷದ ಹದಿನೈದು ಸಾವಿರದ ಎಂಟುನೂರ ಇಪ್ಪತ್ತೊಂಭತ್ತು) ಮಾತ್ರವನ್ನು ಪಾವತಿಸಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ ಎಂದು ಮಾಹಿತಿಯನ್ನು ಸಭೆಯಲ್ಲಿ ಪ್ರಾಧಿಕಾರದ ಆಯುಕ್ತರು ವಿವರಿಸಿದರು.

ಸದರಿ ಅಧಿಕಾರಿಯವರಿಗೆ ಅವರ ಅಧಿಕಾರವಧಿಯಲ್ಲಿ ಪಾವತಿಸಲು ಬಾಕಿ ಇರುವ ರೂ. 3,15,829/– ಮಾತ್ರವನ್ನು ಪಾವತಿಸಲು ಸೂಕ್ತ ಕ್ರಮ ಕೈಗೊಳ್ಳಬಹುದೆಂದು ಆಯುಕ್ತರಿಗೆ ಅಧಿಕಾರ ನೀಡಿ ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

## 18) ವಿಷಯ ಸಂಖ್ಯೆ 18 :– ಅಧ್ಯಕ್ಷರ ಅನುಮತಿ ಮೇರೆಗೆ ಇತರೆ ವಿಷಯಗಳು

1. ರಾಜ್ಯದ ನಗರಾಭಿವೃದ್ಧಿ ಪ್ರಾಧಿಕಾರಗಳು ರೈತರ ಸಹಭಾಗಿತ್ವದಡಿ ವಸತಿ ಯೋಜನೆಯನ್ನು ಶೇ. 50:50 ಅನುಪಾತದಡಿ ಭೂ ಮಾಲೀಕರು ಹಾಗೂ ಸರ್ಕಾರದ ಸಹಭಾಗಿತ್ವದ ಪಾಲುದಾರರ ಯೋಜನೆಯಡಿ ಪ್ರಾಧಿಕಾರದಿಂದ ವಸತಿ ಯೋಜನೆಯನ್ನು ಹಮ್ಮಿಕೊಳ್ಳುವ ಬಗ್ಗೆ.

**ನಿರ್ಣಯ:–** ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರವು ಅಸ್ತಿತ್ವದಲ್ಲಿ ಬಂದು ಇಲ್ಲಿಯವರೆಗೆ ಯಾವುದೇ ವಸತಿ ಯೋಜನೆಯನ್ನು ಕೈಗೆತ್ತಿಕೊಂಡು ಅಭಿವೃದ್ಧಿ ಪಡಿಸಿ, ಸಾರ್ವಜನಿಕರಿಗೆ ನಿವೇಶನಗಳನ್ನು ಹಂಚಿರುವುದಿಲ್ಲ. ಇದನ್ನು ಪರಿಗಣಿಸಿ ಪ್ರಾಧಿಕಾರದ ಅಧ್ಯಕ್ಷರು ಮಾತನಾಡಿ ಈಗಾಗಲೇ ನಾನು ಖಾಸಗಿ ಭೂ ಮಾಲೀಕತ್ವದಲ್ಲಿರುವ ಅಂದಾಜು 5.00 ಎಕರೆ ವಿಸ್ತೀರ್ಣದ ಜಮೀನಿನನ್ನು ಪರಿಶೀಲನೆ ಮಾಡಿದ್ದು, ಮಡಿಕೇರಿ ನಗರದ ಮಹಾಯೋಜನೆಯನ್ವಯ ವಸತಿ ವಲಯದಲ್ಲಿ ಬರುತ್ತದೆ. ಭೂ ಮಾಲೀಕರು 50:50 ಅನುಪಾತದಲ್ಲಿ ಭೂಮಿಯನ್ನು ಪ್ರಾಧಿಕಾರಕ್ಕೆ ಬಿಟ್ಟುಕೊಡಲು ಮುಂದೆ ಬಂದಿರುತ್ತಾರೆ ಎಂದು ಪ್ರಾಧಿಕಾರದ ಅಧ್ಯಕ್ಷರು ತಿಳಿಸಿದರು.

ಆದರೆ ಈ ಬಗ್ಗೆ ಸಭೆಯಲ್ಲಿ ಅರ್ಜಿದಾರರು ಜಮೀನು ನೀಡಲು ತಮ್ಮ ಮನವಿಯೊಂದಿಗೆ ದಾಖಲೆಗಳನ್ನು ಪ್ರಾಧಿಕಾರಕ್ಕೆ ಸಲ್ಲಿಸಿದ ನಂತರ ಮುಂದಿನ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ ಕ್ರಮ ತೆಗೆದುಕೊಳ್ಳಬಹುದೆಂದು ಸಭೆಯು ತೀರ್ಮಾನಿಸಿತು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| **ಸಹಿ/–** | **ಸಹಿ/–** |
| **(ಶ್ರೀಮತಿ ಸುರಯ್ಯಾ ಅಬ್ರಾರ್)** | **(ಶ್ರೀ ಬಿ.ಪಿ.ರಾಜಶೇಖರ್)** |
| **ಅಧ್ಯಕ್ಷರು,** | **ಆಯುಕ್ತರು(ಪ್ರ),** |
| **ನಗರಾಭಿವೃದ್ಧಿ ಪ್ರಾಧಿಕಾರ,** | **ನಗರಾಭಿವೃದ್ಧಿ ಪ್ರಾಧಿಕಾರ,** |
| **ಮಡಿಕೇರಿ.** | **ಮಡಿಕೇರಿ.** |